| 14/01/19 | Language | Disney world | Ms. Sowmya |
| 16/1/19 | Acting club | Rasa theory | Ms. jaishree |
| 17/1/19 | Current affairs | Current news | Ms. Manasa .H.M |
| 18/1/19 | History | Indian history | Ms. Ashraya, Ms. Rakshiha |
| 21/1/19 | Book review | Nanna oorina rasikaru and rekke bicchi akasha necchi | Ms. Rachana R Nayak |
| 23/1/19 | Short stories | Oscar wilde | Mr. Govind yashas |
| 28/1/19 | Science and tech | Sound | Mr. Darshan |
| 29/1/19 | Aptitude | Verbal and non-verbal | Ms .Amruthavarshini |
| 30/1/19 | History | Indian history | Mr. Ravikumar |
| 1/2/19 | Science and tech | Internet | Mr. Nihar |
| 4/2/19 | Aptitude | Reasoning | Ms .Amrutha .B.R |
| 5/2/19 | History | India after independence | Mr .Yashas |
| 6/2/19 | Book review | Steve jobs | Mr .akshay |
| 7/2/19 | Current affairs | Current news | Mr.Honnappa, Mr. sandeep.S |
| 18/2/19 | Science and tech | Diseases | Mr. ganesh .J |
| 19/2/19 | Film review | Memoir | Ms .Sowmya |
| 20/2/19 | Language | Idioms and phrases | Ms. Sowmya |
| 21/2/19 | Geography | Tamilnadu | Ms .Amrutha.H.C |
| 25/2/19 | Aptitude | Arithmetic aptitude | Ms .megha.P, Ms. Shri ranjini |
| 26/2/19 | Science and tech | Honey bees | Mr. Nihar |
| 27/2/19 | Language | Marathi | Ms. Sumathi |
| 1/3/19 | History | Writing skills | Ms. sowmya |
| 5/3/19 | Science and tech | Auto mobiels | Mr .chaithanya |
| 6/3/19 | Aptitude | Permutation and combination | Ms .varsha |
| 7/3/19 | Language | Odhu yeke? Yenu? | Mr .ravikumar |
| 8/3/19 | History | South india | Mr .yashas |
| 11/3/19 | Aptitude | Reasoning | Ms. shri ranjini, Ms. megha |
| 18/3/19 | Aptitude | Probability | Ms. shreeranjini, Ms. Megha P |
| 19/3/19 | History | Vijaya nagara empire | Mr. Ganesh |
| 20/3/19 | Language | Lambani | Ms. Anitha |
| 21/3/19 | Current affairs | Current news | Ms. Sinchana K V, Mr. shridhar |
| 22/3/19 | Science and tech | Fibonacci sequence | Ms. Varsha |
| 1/4/19 | English language | Comprehension | Mr. Balesh |
| 4/4/19 | Art and culture | Classical dance of india | Ms. Anusha |
| 11/4/19 | Current affairs | Current news | Ms. Nayana T V, Ms. Priya sagar |
| 15/4/19 | Science and tech | Bio-technology | Ms. Megha P, Ms. Shreeranjini |
| 16/4/19 | History | Jalianwala bagh | Mr. Govind yashas |

Scanned with OKEN Scanner

# NATIONAL CADET CORPS

## NCC : 2018-19

## 2B/20 Company

## UNITY AND DISCIPLINE

I feel very proud to present the annual report of NCC activities conducted by our company 2B/20, Sahyadri Science College during the year 2018-19.

NCC was established in 1948. The NCC units spread all over India have been doing an excellent job since their establishment. On various occasions cadets have served the nation even when their lives were in danger. With the admission of our cadets in the month of July-2018, the activities of our company began for the academic year -2018-19. The cadet strength authorized for the company is 108. Presently, there are 49 SW cadets and 59 SD cadets; total 108 cadets.

The NCC Company of Sahyadri Science College is designated as 2B/20 company. The NCC Directorate has well made syllabus that comprises, Drill, Weapon training, Leadership, civil defense, First aid, Hygiene & Sanitation, Community development, Human right, Adventure activity Ecology/nature awareness, self defense, Map reading (MR), Home nursing, Family welfare, General knowledge, Man management, Field craft and Battle craft (FC/BC), Communication,Social services activities like(Blood donation, Anti dowry, Aids awareness, Area cleaning, tree plantation ) etc.

The 20 Kar. Batallion NCC, Shimoga provides PI Staff who are trained military personnel to impart training. The batallion provides training equipments and other facilities. In the college campus, various facilities are provided for carrying out obstacle courses. There is a large parade ground in the college premises for imparting training to the cadets.

The role of youth service is essential for the growth and development of the nation. NCC builds leadership, personality and encourages the social activities among the cadets. The growth and development of nation or country depends on youth power.

### Activities of our company during the year the 2018-19:

- ✔ Enrolled for NCC 1st year cadets in this academic year on july, 2018
- ✔ 21 cadets have passed 'B'-certificate Examination in the year 2018, in this exam.8 cadets got A grade and 13 cadets got B grade.
- ✔ And in C certificate examination 30 cadets are passed. In this exam. 7 cadets got A grade and 23 cadets got B grade
- ✔ on May 2018, 2 cadets are participated for zonal shooting held at Bangalore
- ✔ 30 cadets participated in International Day of YOGA held at Kuvempu university campus on 21st June 2018,Organized by 20 kar bn NCC.



Scanned with OKEN Scanner

- In june 2018, 30 cadets are participated in ATC camp held at Kuvempu university Shankaraghatta & 9 cadets are participated in BLC held at mysore.
- On july ,10 cadets participated in TSC1 & 2 SW cadets selected for IGC.
- On August 4 cadets participated in AAC at Sikandarabhad (artillery regiment) and 2 cadets participated in NIC at Ahmadabad.
- On the occasion of the Independence Day (15th August 2018) all the NCC cadets participated in the flag hoisting ceremony in our college and made it a grand success.
- On Sept-2nd 2017 all NCC cadets participated in SWACHH BHARATH Mission in our college campus. And our cadets make a short movie on swach bharath and got cash prize Rs.2000.
- There are 7 cadets participated in NIC held at Varanasi (Mughalsarai), and 1 cadet participated in Army Attachment Camp (signal regiment) at Goa, also 1 SW cadet participated in Army Attachment Camp(Para- regiment) at Bangalore.
- On tree plantation programme : oct-10th 10 plants are planted in college campus
- NCC- Day celebrated on 26th Nov.2018 in front of college Associate with 20 kar bn ncc.
- We organize blood donation camp on 5th Jan- 2019 our cadets have donated blood 14 units and 103 units students in the college total 117 units of blood donated to Sanjeevini Red Cross, Blood bank and govt, Mcgann hospital blood bank, Shimoga,
- On the occasion of the Republic Day parade (26th January 2019) all the NCC cadets participated in the flag hoisting ceremony in our college and made it a grand success.

Along with the above said events, our NCC unit participated in many other socio-cultural activities of the college. I take this opportunity to thank our principal Prof. ShashiRekha.K.R Madam, who has generously supported us. I also thank Col.Varinder Singh, Commanding Officer, 20-kar Bn.NCC for the able leadership and great motivation. I also thank the staff members of our college for theirco-operation in NCC activities and also thank Sub. Major and all PI staff who have helped a lot. They were very enthusiastic and keen in shaping the career of our cadets.

I thank HOD's of all the department of Sahyadri Science College, teaching and non-teaching staff of our college is also acknowledged.

**-Capt. K.M.Mohanesha**
Company commander
(2B/20 COY)



Scanned with OKEN Scanner

"ಶ್ರಮಯೇವ ಜಯತೇ"

# ರಾಷ್ಟ್ರೀಯ ಸೇವಾ ಯೋಜನೆ

## ವಾರ್ಷಿಕ ವರದಿ 2018–19

**ರಾ.ಸೇ.ಯೋ. ಅಧಿಕಾರಿಗಳು**

1) **ಶ್ರೀ ಸಾಯಿಶ್ವರ ಹೆಚ್.ಎ.**
ಸಹಾಯಕ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ
ಸಹ್ಯಾದ್ರಿ ವಿಜ್ಞಾನ ಕಾಲೇಜು

2) **ಡಾ. ವಿದ್ಯಾಶಂಕರ ಎಂ.ಹೆಚ್.**
ಮುಖ್ಯಸ್ಥರು, ಗಣಕ ಶಾಸ್ತ್ರ ವಿಭಾಗ
ಸಹ್ಯಾದ್ರಿ ವಿಜ್ಞಾನ ಕಾಲೇಜು

**ರಾ.ಸೇ.ಯೋ. ಸಲಹಾ ಸಮಿತಿ**

1. **ಡಾ. ಕೆ. ಶಶಿರೇಖಾ,** ಪ್ರಾಂಶುಪಾಲರು, ಅಧ್ಯಕ್ಷರು
2. **ಶ್ರೀ ಸಾಯೀಶ್ವರ ಹೆಚ್.ಎ.**
3. **ಡಾ. ನಟರಾಜ.ಎಸ್.**
4. **ಡಾ. ನಾಗರಾಜ ಪರಿಸರ.ಎಸ್.**
5. **ಶ್ರೀ. ರವಿಕುಮಾರ್. ಆರ್.**
6. **ಡಾ. ವಿದ್ಯಾಶಂಕರ.ಎಂ.ಹೆಚ್.**

**ವಿದ್ಯಾರ್ಥಿ ಪ್ರತಿನಿಧಿಗಳು**

1. **ಮಧುಶ್ರೀ**
2. **ಚೇತನ್**

ನಾವು ಇಂದೇನಾಗಿದ್ದೇವೆಯೋ ಅದಕ್ಕೆ ನೆನ್ನೆಯ ಆಲೋಚನೆಗಳೇ ಕಾರಣ. ಇಂದಿನ ಆಲೋಚನೆಗಳೇ ನಮ್ಮ ಮುಂದಿನ ದಿನಗಳನ್ನು ರೂಪಿಸುತ್ತವೆ. ಆದ್ದರಿಂದ ನಮ್ಮ ಆಲೋಚನೆಗಳು ಉತ್ತಮವಾಗಿರಬೇಕು. ಎಂಬಂತೆ ನಾವೆಲ್ಲರೂ ಮಧ್ಯಾಹ್ನ 2 ಗಂಟೆಗೆ ಕೊರಗಿಗೆ ತಲುಪಿದೆವು ನಂತರ ಶಿಬಿರಾರ್ಥಿಗಳು 4.00ಗಂಟೆಗೆ ಜಾಥ ಹೊರಟು ಮನೆಮನೆಗೆ ಹೋಗಿ ಶಿಬಿರಕ್ಕೆ ಗ್ರಾಮಸ್ಥರನ್ನು ಆಹ್ವಾನಿಸಿದೆವು. ಸಂಜೆ 7.00 ಗಂಟೆಗೆ ಶಿಬಿರದ ನಿಯಮ ಮತ್ತು ರೂಪುರೇಷೆಗಳನ್ನು ಶಿಬಿರಾಧಿಕಾರಿಗಳಾದ ಡಾ.ವಿದ್ಯಾಶಂಕರ್ ಎಂ.ಎಚ್, ಶ್ರೀ ಸಾಯಿಶ್ವರ ರವರು ತಿಳಿಸಿದರು. ನಂತರ ರಾತ್ರಿ 8.00 ಗಂಟೆಗೆ ಶರಾವತಿ ತಂಡಕ್ಕೆ ಧ್ವಜ ಹಸ್ತಾಂತರ ಮಾಡಿ ಮೊದಲನೇ ಧ್ವಜಾರೋಹಣದ ಜವಾಬ್ದಾರಿಯನ್ನು ನೀಡಲಾಯಿತು.

ದಿನಾಂಕ :23–01–2019 ರಂದು ಕೊರಗಿ ಗ್ರಾಮದ ನೀಲಕಂಠೇಶ್ವರ ದೇವಸ್ಥಾನದ ಆವರಣದಲ್ಲಿ ಮುಂಜಾನೆ 6.00 ಗಂಟೆಗೆ ಧ್ವಾಜಾರೋಹಣ ಕಾರ್ಯಕ್ರಮ ಪ್ರಾರಂಭವಾಯಿತು ಗ್ರಾಮದ ಹಿರಿಯರಾದ ಶ್ರೀ ಮಂಜುನಾಥ್ ಧ್ವಜಾರೋಹಣ ನೆರವೇರಿಸಿದರು. ಧ್ವಜಾರೋಹಣ ಕಾರ್ಯಕ್ರಮವನ್ನು ಶರಾವತಿ ತಂಡದವರು ಯಶಸ್ವಿಯಾಗಿ ನಡೆಸಿಕೊಟ್ಟರು. ನಂತರ ಲಘು ವ್ಯಾಯಾಮ ಮಾಡಿ ಬೆಳಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆವರೆಗೆ ದೇವಸ್ಥಾನದ ಆವರಣದಲ್ಲಿ ಶ್ರಮದಾನ ಮಾಡಿದೆವು. ಮದ್ಯಾಹ್ನ 3.00 ಗಂಟೆಗೆ ಶ್ರೀ ಅ.ನ: ವಿಜಯೇಂದ್ರ ರಾಷ್ಟ್ರೀಯ ಸಮಿತಿ ಸದಸ್ಯರಾದ ಇವರು ವಿದ್ಯಾರ್ಥಿಗಳನ್ನು ಕುರಿತು ಕ್ರೀಡೆಗಳಿಂದ ವ್ಯಕ್ತಿತ್ವ ವಿಕಸನ ಎಂಬ ವಿಷಯದ ಮೇಲೆ ತರಬೇತಿ ನೀಡಿದರು. ಅನಂತರ ಸಂಜೆ 6.00 ಗಂಟೆಗೆ ಆಶುಭಾಷಣ ಸ್ಪರ್ಧೆ ನಡೆಯಿತು.



Scanned with OKEN Scanner

ಅನಂತರ ಧ್ವಜವನ್ನು ಗ್ರಾಮದ ಸ್ತ್ರೀ ಶಕ್ತಿ ಸಂಘದ ಅಧ್ಯಕ್ಷರಾದ ಶ್ರೀಮತಿ ಮಾನಸ ರಮೇಶ್ ಶರಾವತಿ ತಂಡದಿಂದ ವರದಾ ತಂಡಕ್ಕೆ ಹಸ್ತಾಂತರಿಸಿ ಶುಭ ಹಾರೈಸಿದರು.

ದಿನಾಂಕ :24–01–2019 ರಂದು ಕೊರಗಿ ಗ್ರಾಮದ ನೀಲಕಂಠೇಶ್ವರ ದೇವಸ್ಥಾನದ ಆವರಣದಲ್ಲಿ ಮುಂಜಾನೆ 6.00 ಗಂಟೆಗೆ ಧ್ವಜಾರೋಹಣ ಕಾರ್ಯಕ್ರಮ ಪ್ರಾರಂಭವಾಯಿತು ಗ್ರಾಮದ ಹಿರಿಯರಾದ ಶ್ರೀ ರಾಮಪ್ಪ ಧ್ವಜಾರೋಹಣ ನೆರವೇರಿಸಿದರು. ಧ್ವಜಾರೋಹಣ ಕಾರ್ಯಕ್ರಮವನ್ನು ವರದಾ ತಂಡದವರು ಯಶಸ್ವಿಯಾಗಿ ನಡೆಸಿಕೊಟ್ಟರು. ನಂತರ ಮುಂಜಾನೆ 7.00 ಗಂಟೆಗೆ ಶ್ರೀ ದರ್ಶನ್ ಮತ್ತು ಶ್ರೀ ಚೇತನ್ ಕುವೆಂಪು ವಿಶ್ವ ವಿದ್ಯಾಲಯದ ವೈಲ್ಡ್ ಲೈಫ್ ವಿದ್ಯಾರ್ಥಿಗಳು ಇವರು ಪಕ್ಷಿ ವೀಕ್ಷಣೆ ಮತ್ತು ಗುರುತಿಸುವಿಕೆ ಕುರಿತು ತರಬೇತಿಯನ್ನು ನೀಡಿದರು. ನಂತರ ಬೆಳಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆವರೆಗೆ ಶಾಲಾ ಆವರಣದಲ್ಲಿ ಶ್ರಮದಾನ ಮಾಡಿದೆವು. ಮದ್ಯಾಹ್ನ 3.00 ಗಂಟೆಗೆ ರಂಗಭೂಮಿ ವಿಷಯದ ಕುರಿತು ವಿಷಯ ಮಂಡನೆ ಮಾಡಲಾಯಿತು. ನಂತರ ಜಾಥಾ ಹೊರಟು ಉದ್ಘಾಟನಾ ಸಮಾರಂಭ ಮತ್ತು ನಾಟಕ ಪ್ರದರ್ಶನ ಕಾರ್ಯಕ್ರಮಕ್ಕೆ ಗ್ರಾಮಸ್ಥರನ್ನು ಆಹ್ವಾನಿಸಲಾಯಿತು. ಸಂಜೆ 6.00 ಗಂಟೆಗೆ ಉದ್ಘಾಟನಾ ಸಮಾರಂಭವು ಡಾ. ಶಶಿರೇಖಾ ಕೆ.ಆರ್ ಪ್ರಾಚಾರ್ಯರು ಸಹ್ಯಾದ್ರಿ ವಿಜ್ಞಾನ ಕಾಲೇಜು ಶಿವಮೊಗ್ಗ ಇವರ ಅಧ್ಯಕ್ಷತೆಯಲ್ಲಿ ನಡೆಯಿತು ತುಪ್ಪೂರು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀ ಮಂಜಪ್ಪ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ರತ್ನಮ್ಮ ಮಂಜುನಾಥ್ ಗ್ರಾಮ ಪಂಚಾಯಿತಿ ಸದಸ್ಯರು ಶ್ರೀ ಈಶ್ವರ್, ಎಸ್.ಡಿ.ಎಂ.ಸಿ. ಸದಸ್ಯರು ಹಾಗೂ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಪರಮೇಶ್ವರ ನಾಯ್ಕ, ಡಾ. ಶ್ರೀಕಂಠ, ಪ್ರೊ. ರವಿಕುಮಾರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ನಿರ್ವಹಿಸಿದೆನು. ಡಾ.ವಿದ್ಯಾಶಂಕರ್ ಎಂ.ಎಚ್ ಶಿಬಿರಾಧಿಕಾರಿಗಳು ಪ್ರಾಸ್ತಾವಿಕ ನುಡಿಗಳನ್ನಾಡಿ ಸರ್ವರನ್ನು ಸ್ವಾಗತಿಸಿದರು. ಪ್ರೊ ಸಾಯಿಶ್ವರ್ ವಂದಿಸಿದರು. ನಂತರ ರಾತ್ರಿ 8.00 ಗಂಟೆಗೆ ಶ್ರೀ ಲವ ಜಿ.ಆರ್. ಕನ್ನಡ ಉಪನ್ಯಾಸಕರು ಹಾಗೂ ರಂಗಕರ್ಮಿಗಳು ಇವರು ನಿರ್ದೇಶಿಸಿದ 'ಸ್ಮಶಾನ ಕುರುಕ್ಷೇತ್ರಂ' ನಾಟಕವನ್ನು ಸಹ್ಯಾದ್ರಿ ವಿಜ್ಞಾನ ಕಾಲೇಜಿನ ರಾ.ಸೇ.ಯೋ ಸ್ವಯಂ ಸೇವಕರು ಪ್ರದರ್ಶಿಸಿದರು. ಈ ನಾಟಕದಲ್ಲಿ ಕೌರವನ ಪಾತ್ರವನ್ನು ವಿದ್ಯಾರ್ಥಿ ಚೇತನ್ ನಿರ್ವಹಿಸಿದ್ದರು. ರಾತ್ರಿ 9.20ಕ್ಕೆ ಡಾ. ವಿದ್ಯಾಶಂಕರ್ ಎಂ.ಎಚ್., ಪ್ರೊ. ಸಾಯಿಶ್ವರ ಶಿಬಿರಾಧಿಕಾರಿಗಳು ಇವರು ವರದಾ ತಂಡದಿಂದ ಭದ್ರಾ ತಂಡಕ್ಕೆ ಧ್ವಜವನ್ನು ಹಸ್ತಾಂತರಿಸಿ ಶುಭ ಹಾರೈಸಿದರು.

ದಿನಾಂಕ :25–01–2019 ರಂದು ಕೊರಗಿ ಗ್ರಾಮದ ನೀಲಕಂಠೇಶ್ವರ ದೇವಸ್ಥಾನದ ಆವರಣದಲ್ಲಿ ಮುಂಜಾನೆ 6.00 ಗಂಟೆಗೆ ಧ್ವಜಾರೋಹಣ ಕಾರ್ಯಕ್ರಮ ಪ್ರಾರಂಭವಾಯಿತು ಶಿಬಿರದ ಅಡುಗೆಯವರಾದ ಶ್ರೀ ದತ್ತಾತ್ರೇಯ ಮತ್ತು ಭೂಷಣ್ ಧ್ವಜಾರೋಹಣ ನೆರವೇರಿಸಿದರು. ಧ್ವಜಾರೋಹಣ ಕಾರ್ಯಕ್ರಮವನ್ನು ಭದ್ರಾ ತಂಡದವರು ಯಶಸ್ವಿಯಾಗಿ ನಡೆಸಿಕೊಟ್ಟರು. ನಂತರ ಲಘು ವ್ಯಾಯಾಮ ಮಾಡಿ ಬೆಳಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆವರೆಗೆ ಗ್ರಾಮದ ಚರಂಡಿಗಳ ಸ್ವಚ್ಛತೆ ಮಾಡಿದೆವು. ಮದ್ಯಾಹ್ನ 3.00 ಗಂಟೆಗೆ ಶ್ರೀ ಹರ್ಷ ಗಿ ಗೋಭಟ್ ರಂಗ ಕಲಾವಿದರು ನೀನಾಸಂ ಪದವೀಧರರು ಇವರು ರಂಗ ತರಬೇತಿ ನೀಡಿದರು. ನಂತರ ಸಂಜೆ 6.00 ಗಂಟೆಗೆ ಶಿಬಿರಾರ್ಥಿಗಳಿಂದ ಮತ್ತು ಗ್ರಾಮದ ಚಿಣ್ಣರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು ನಂತರ ರಾತ್ರಿ 8.00ಗಂಟೆಗೆ ಡಾ.ವಿದ್ಯಾಶಂಕರ್ ಎಂ.ಎಚ್, ಪ್ರೋ.ಸಾಯಿಶ್ವರ ಶಿಬಿರಾಧಿಕಾರಿಗಳು ಇವರು ಭದ್ರಾ ತಂಡದಿಂದ ಕಾವೇರಿ ತಂಡಕ್ಕೆ ಧ್ವಜವನ್ನು ಹಸ್ತಾಂತರಿಸಿ ಶುಭ ಹಾರೈಸಿದರು.

ದಿನಾಂಕ :26–01–2019 ರಂದು ಕೊರಗಿ ಗ್ರಾಮದ ನೀಲಕಂಠೇಶ್ವರ ದೇವಸ್ಥಾನದ ಆವರಣದಲ್ಲಿ ಮುಂಜಾನೆ 6.00 ಗಂಟೆಗೆ ಧ್ವಜಾರೋಹಣ ಕಾರ್ಯಕ್ರಮ ಪ್ರಾರಂಭವಾಯಿತು ಊರಿನ ಗ್ರಾಮಸ್ಥರಾದ ಶ್ರೀ ನರಸಿಂಹ ಪೂಜಾರಿ ಧ್ವಜಾರೋಹಣ ನೆರವೇರಿಸಿದರು. ಧ್ವಜಾರೋಹಣ ಕಾರ್ಯಕ್ರಮವನ್ನು ಕಾವೇರಿ ತಂಡದವರು ಯಶಸ್ವಿಯಾಗಿ ನಡೆಸಿಕೊಟ್ಟರು. ನಂತರ ಲಘು ವ್ಯಾಯಾಮ ಮಾಡಿ ಬೆಳಗ್ಗೆ 8.00 ಗಂಟೆಗೆ ಗಣರಾಜ್ಯೋತ್ಸವ ದಿನಾಚರಣೆಯನ್ನು ಮಾಡಿದೆವು ನಂತರ ಬೆಳಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆವರೆಗೆ ಗ್ರಾಮದ ಶಾಲಾಆವರಣದಲ್ಲಿ ಸಂಪಿಗೆ ವನ ನಿರ್ಮಾಣ ಮಾಡಿದೆವು. ಮಧ್ಯಾಹ್ನ 3.00 ಗಂಟೆಗೆ ಶ್ರೀ ಹರ್ಷ ಗಿ.ಗೋ. ಭಟ್ ರಂಗ ಕಲಾವಿದರು ನೀನಾಸಂ ಪದವೀಧರರು ಇವರು ರಂಗ ತರಬೇತಿ ನೀಡಿದರು. ನಂತರ ಸಂಜೆ 6.00 ಗಂಟೆಗೆ ಶಿಬಿರಾರ್ಥಿಗಳಿಂದ



Scanned with OKEN Scanner

ಮತ್ತು ಗ್ರಾಮದ ಚಿಣ್ಣರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು ನಂತರ ರಾತ್ರಿ 8.00ಗಂಟೆಗೆ ಡಾ. ವಿದ್ಯಾಶಂಕರ್ ಎಂ.ಎಚ್, ಪ್ರೊ. ಸಾಯಿಶ್ವರ್ ಶಿಬಿರಾಧಿಕಾರಿಗಳು ಇವರು ಕಾವೇರಿ ತಂಡದಿಂದ ತುಂಗಾ ತಂಡಕ್ಕೆ ಧ್ವಜವನ್ನು ಹಸ್ತಾಂತರಿಸಿ ಶುಭ ಹಾರೈಸಿದರು.

ದಿನಾಂಕ :27-01-2019 ರಂದು ಕೊರಗಿ ಗ್ರಾಮದ ನೀಲಕಂಠೇಶ್ವರ ದೇವಸ್ಥಾನದ ಆವರಣದಲ್ಲಿ ಮುಂಜಾನೆ 6.00 ಗಂಟೆಗೆ ಧ್ವಜಾರೋಹಣ ಕಾರ್ಯಕ್ರಮ ಪ್ರಾರಂಭವಾಯಿತು ಊರಿನ ಗ್ರಾಮಸ್ಥರಾದ ಶ್ರೀ ಜಯಣ್ಣ ಧ್ವಜಾರೋಹಣ ನೆರವೇರಿಸಿದರು. ಧ್ವಜಾರೋಹಣ ಕಾರ್ಯಕ್ರಮವನ್ನು ತುಂಗಾ ತಂಡದವರು ಯಶಸ್ವಿಯಾಗಿ ನಡೆಸಿಕೊಟ್ಟರು. ನಂತರ ಲಘು ವ್ಯಾಯಾಮ ಮಾಡಿ ನಂತರ ಬೆಳಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆವರೆಗೆ ಗ್ರಾಮದ ಶಾಲಾ ಆವರಣದಲ್ಲಿ ಶ್ರಮದಾನ ನೆರವೇರಿಸಲಾಯಿತು. ಬೆಳಗ್ಗೆ 10.00 ಗಂಟೆಗೆ ರಕ್ತದಾನ ಶಿಬಿರದಲ್ಲಿ ಶಿಬಿರಾರ್ಥಿಗಳು ರಕ್ತದಾನ ಮಾಡಿದರು. ಮಧ್ಯಾಹ್ನ 3.00 ಗಂಟೆಗೆ ಡಾ. ಮಹಾಬಲೇಶ್, ಕಾರ್ಯದರ್ಶಿಗಳು, ತರುಣಭಾರತಿ ವಿದ್ಯಾಕೇಂದ್ರ, ಭದ್ರಾವತಿ ಇವರು ಸೇವೆಯ ಮಹತ್ವ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ನಂತರ ಸಂಜೆ 6.00 ಗಂಟೆಗೆ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು ನಂತರ ರಾತ್ರಿ 8.00ಗಂಟೆಗೆ ಡಾ. ವಿದ್ಯಾಶಂಕರ್ ಎಂ.ಎಚ್., ಪ್ರೊ. ಸಾಯಿಶ್ವರ್ ಶಿಬಿರಾಧಿಕಾರಿಗಳು ಇವರು ತುಂಗಾ ತಂಡದಿಂದ ನೇತ್ರಾವತಿ ತಂಡಕ್ಕೆ ಧ್ವಜವನ್ನು ಹಸ್ತಾಂತರಿಸಿ ಶುಭ ಹಾರೈಸಿದರು. ರಾತ್ರಿ 9.00 ಗಂಟೆಗೆ ದೀಪೋತ್ಸವ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ದಿನಾಂಕ :28-01-2019 ರಂದು ಕೊರಗಿ ಗ್ರಾಮದ ನೀಲಕಂಠೇಶ್ವರ ದೇವಸ್ಥಾನದ ಆವರಣದಲ್ಲಿ ಮುಂಜಾನೆ 6.00 ಗಂಟೆಗೆ ಧ್ವಜಾರೋಹಣ ಕಾರ್ಯಕ್ರಮ ಪ್ರಾರಂಭವಾಯಿತು. ಊರಿನ ಗ್ರಾಮಸ್ಥರಾದ ಶ್ರೀ ಕುಬೇರಪ್ಪಗೌಡ್ರು, ಶ್ರೀ ಎಚ್. ಹನುಮಂತಪ್ಪ ಧ್ವಜಾರೋಹಣ ನೆರವೇರಿಸಿದರು. ಧ್ವಜಾರೋಹಣ ಕಾರ್ಯಕ್ರಮವನ್ನು ನೇತ್ರಾವತಿ ತಂಡದವರು ಯಶಸ್ವಿಯಾಗಿ ನಡೆಸಿಕೊಟ್ಟರು ಮುಂಜಾನೆ 11.00 ಗಂಟೆಗೆ ಸಮಾರೋಪ ಸಮಾರಂಭ ಪ್ರಾರಂಭವಾಯಿತು. ಶ್ರೀ ಬೆಕ್ಕೂರು ರಾಮಪ್ಪ ಮಾಜಿ ಪ್ರಧಾನರು ಕೊರಗಿ ಇವರು ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಡಾ.ಗಿರಿಧರ್ ಕೆ.ವಿ ಸಂಯೋಜನಾಧಿಕಾರಿಗಳು ರಾ.ಸೇ.ಯೋ ಕುವೆಂಪು ವಿಶ್ವವಿದ್ಯಾಲಯ ಇವರು ಸಮಾರೋಪ ನುಡಿಗಳನ್ನಾಡಿದರು. ಶ್ರೀಮತಿ ಸರೋಜಮ್ಮ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರು, ಶ್ರೀ ಮಂಜಪ್ಪ ಗ್ರಾಮಪಂಚಾಯಿತಿ ಅಧ್ಯಕ್ಷರು ಹಾಗೂ ಕೊರಗಿ ಗ್ರಾಮಸ್ಥರು, ಶಿಬಿರಾಧಿಕಾರಿಗಳಾದ ಡಾ. ವಿದ್ಯಾಶಂಕರ್ ಎಂ.ಎಚ್., ಪ್ರೊ. ಸಾಯಿಶ್ವರ, ಡಾ. ಗಿರಿಧರ್ ಕೆ.ವಿ. ಇವರುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಂಜೆ 6.00 ಗಂಟೆಗೆ ಗ್ರಾಮ ವಾಸ್ತವ್ಯವನ್ನು ಮುಗಿಸಿ ಎಲ್ಲರೂ ಕಾಲೇಜಿಗೆ ಮರಳಿ ಬಂದೆವು.

ರಕ್ತದಾನ ಶಿಬಿರ, ವನಮಹೋತ್ಸವ, ದಂತ ತಪಾಸಣೆ, ಆರೋಗ್ಯ ತಪಸಾಣೆ ಶಿಬಿರಗಳನ್ನು ವಿಶೇಷವಾಗಿ ವಿವಿಧ ಕಡೆ ಆಯೋಜಿಸಿದ್ದು, ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು, ವ್ಯಕ್ತಿತ್ವ ವಿಕಸನ ಶಿಬಿರಗಳನ್ನು ಮಾಡುವುದರ ಮೂಲಕ ಸಹ್ಯಾದ್ರಿ ವಿಜ್ಞಾನ ಕಾಲೇಜು ವಿಶ್ವವಿದ್ಯಾಲಯ ಮಟ್ಟದ ಅತ್ಯುತ್ತಮ ಘಟಕ ಪ್ರಶಸ್ತಿ ಗಳಿಸಿದ್ದು ಕಾಲೇಜಿನ ಪರವಾಗಿ ಡಾ. ಶಶಿರೇಖಾ, ಪ್ರಾಂಶುಪಾಲರು ಪ್ರಶಸ್ತಿಯನ್ನು ಪಡೆದರು. ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿಯಾ ಡಾ. ವಿದ್ಯಾಶಂಕರ್ ಎಂ.ಹೆಚ್. ಇವರು ಉತ್ತಮ ಎನ್.ಎಸ್.ಎಸ್. ಅಧಿಕಾರಿ ಎಂಬ ಪ್ರಶಸ್ತಿಯನ್ನು ಪಡೆದುಕೊಂಡಿರುತ್ತಾರೆ.

ರಾ.ಸೇ.ಯೋ ಕಾರ್ಯಕ್ರಮ ಅಧಿಕಾರಿಗಳು

ಶ್ರೀ ಸಾಯಿಶ್ವರ ಹೆಚ್.ಎ.
(ಘಟಕ-1ರ ಅಧಿಕಾರಿ)

ಡಾ. ವಿದ್ಯಾಶಂಕರ.ಎಂ.ಹೆಚ್.
(ಘಟಕ-2ರ ಅಧಿಕಾರಿ)

# ಯುವ ರೆಡ್‌ಕ್ರಾಸ್ ವರದಿ

# 2018-19

ಯುವ ರೆಡ್ ಕ್ರಾಸ್ ಘಟಕವು ಒಂದು ಸ್ವಯಂ ಸೇವಾ ಸಂಸ್ಥೆಯಾಗಿದ್ದು ವಿದ್ಯಾರ್ಥಿಗಳಲ್ಲಿ ಜಾತಿ- ಮತ ಮೇಲು-ಕೀಳು ಭಾವನೆಗಳನ್ನು ತೊರೆದು ಎಲ್ಲರಲ್ಲಿ ಸಮಾನತೆಯನ್ನು ಕಾಪಾಡಿಕೊಂಡು ಬರುವುದರೊಂದಿಗೆ ಸೌಹಾರ್ದತೆಯಿಂದ ವರ್ತಿಸಲು ಸೇವಾ ಮನೋಭಾವನೆಯನ್ನು ಬೆಳೆಸಲು ಹಾಗೂ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದು, ಹಲವಾರು ತೊಂದರೆಗಳಿಂದ ಬಳಲುತ್ತಿರುವವರಿಗೆ ಸಹಾಯಹಸ್ತ ನೀಡುವುದು (ಬರಪೀಡಿತರು, ನೆರೆಹಾವಳಿಯಿಂದ ಪೀಡಿತರಾದವರು: ಇತ್ಯಾದಿ) ಹಾಗೆಯೇ ರಕ್ತದಾನ, ನೇತ್ರದಾನ ಮೊದಲಾದವುಗಳ ಬಗ್ಗೆ ಅರಿವು ಮೂಡಿಸುವುದು. ಇತ್ಯಾದಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದರೊಂದಿಗೆ ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿ ಸೇವೆಯನ್ನು ಮಾಡುವುದು ಈ ಘಟಕದ ಉದ್ದೇಶವಾಗಿದೆ. ಇದೇ ಉದ್ದೇಶಗಳನ್ನಿಟ್ಟುಕೊಂಡು ನಮ್ಮ ಕಾಲೇಜಿನ ವಿದ್ಯಾರ್ಥಿಗಳೆಲ್ಲರೂ ಸರ್ಕಾರದ ಆದೇಶದ ಮೇರೆಗೆ ಯುವ ರೆಡ್ ಕ್ರಾಸ್ ಘಟಕದ ಸದಸ್ಯರಾಗಿದ್ದು. ಈ ಘಟಕವು ನಡೆಸುತ್ತಿರುವ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತಿದ್ದಾರೆ.

***2018-19ನೇ ಸಾಲಿಗೆ ಯುವ ರೆಡ್ ಕ್ರಾಸ್ ಘಟಕದ ಕಾರ್ಯಕ್ರಮಗಳ ರೂಪುರೇಷೆಗಳನ್ನು ಸಿದ್ಧಪಡಿಸುವುದಕ್ಕಾಗಿ ಈ ಕೆಳಕಂಡಂತೆ ಸಮಿತಿಯನ್ನು ರಚಿಸಿಕೊಳ್ಳಲಾಯಿತು.***

| | | |
|---|---|---|
| **ಡಾ. ಕೆ.ಆರ್ ಶಶಿರೇಖಾ,** ಪ್ರಾಂಶುಪಾಲರು | - | ಅಧ್ಯಕ್ಷರು |
| **ಡಾ. ಡೈಸಿ ಜಾಸ್ಮಿನ್ ಜಾರ್ಜ್** | - | ಸಂಯೋಜನಾಧಿಕಾರಿಗಳು |
| **ಪ್ರೊ. ಗೋಪಾಲ್ ಟಿ.ಡಿ.** | - | ಸಹ ಸಂಚಾಲಕರು |
| **ಡಾ ರಮೇಶ್ ಬಾಬು** | - | ಸದಸ್ಯರು (IQAC) |
| **ಪ್ರೊ. ಮೊಹನೇಶ್** | - | ಸದಸ್ಯರು (NCC) |
| **ಡಾ. ವಿದ್ಯಾಶಂಕರ್** | - | ಸದಸ್ಯರು (NSS) |
| **ಪ್ರೊ. ಸಾಯೀಶ್ವರ ಹೆಚ್.ಎ.** | - | ಸದಸ್ಯರು (NSS) |
| **ಡಾ. ಶ್ರೀಕಂಠ ಎಸ್.ಎ.** | - | ಸದಸ್ಯರು (ರೊವರ್ಸ್) |
| **ಡಾ. ಪವಿತ್ರ ಜಿ.ಎಂ.** | - | ಸದಸ್ಯರು (ರೇಂಜರ್ಸ್) |
| **ದಿನೇಶ್ ಎಂ.** | - | ತೃತೀಯ ಬಿ.ಎಸ್ಸಿ. ವಿದ್ಯಾರ್ಥಿ ಪ್ರತಿನಿಧಿ |
| **ಮಧುಶ್ರೀ ಎಂ.** | - | ತೃತೀಯ ಬಿ.ಸ್ಸಿ. ವಿದ್ಯಾರ್ಥಿನಿ ಪ್ರತಿನಿಧಿ |
| **ಕುಸುಮ** | - | ದ್ವಿತೀಯ ಬಿ.ಎಸ್ಸಿ. ವಿದ್ಯಾರ್ಥಿ ಸದಸ್ಯರು |
| **ಮಂಜುಳ** | - | ದ್ವಿತೀಯ ಬಿ.ಎಸ್ಸಿ. ಸದಸ್ಯರು |
| **ಸುಷ್ಮ** | - | ತೃತೀಯ ಬಿ.ಸಿ.ಎ. ಸದಸ್ಯರು |
| **ಪ್ರಿಯಾ** | - | ತೃತೀಯ ಬಿ.ಎಸ್ಸಿ ಸದಸ್ಯರು |
| **ಆನಂದ** | - | ಪ್ರಥಮ ಬಿ.ಎಸ್ಸಿ ಸದಸ್ಯರು |
| **ಮೇಘನ** | - | ಪ್ರಥಮ ಬಿ.ಎಸ್ಸಿ ಸದಸ್ಯರು |



Scanned with OKEN Scanner

ಈ ಸಮಿತಿಯು ಅಧ್ಯಕ್ಷರಾದ ಡಾ. ಶಶಿರೇಖಾ ಕೆ.ಆರ್. ಪ್ರಾಂಶುಪಾಲರು ಇವರ ಅನುಮತಿಯ ಮೇರೆಗೆ ದಿನಾಂಕ: 1:08:2018ರಂದು ಯುವ ರೆಡ್ ಕ್ರಾಸ್ ಘಟಕದ ಉದ್ಘಾಟನಾ ಸಮಾರಂಭದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಕಾಲೇಜಿನ ಬಹುತೇಕ ವಿದ್ಯಾರ್ಥಿ/ವಿದ್ಯಾರ್ಥಿನಿಯರು, ಅಧ್ಯಾಪಕ ವರ್ಗದವರು ಹಾಗೂ ಅಧ್ಯಾಪಕೇತರ ವರ್ಗದವರು ಇದರ ಪ್ರಯೋಜನವನ್ನು ಪಡೆದುಕೊಂಡರು.

ದಿನಾಂಕ: 25/08/2018ರಂದು ಯುವ ರೆಡ್ ಕ್ರಾಸ್ ಘಟಕ, ಎನ್.ಎಸ್.ಎಸ್. ರೇಂಜರ್ಸ್ & ರೋವರ್ಸ್ ಸಹಯೋಗದೊಂದಿಗೆ ರಕ್ತದಾನ ಶಿಬಿರವನ್ನು ನಡೆಸಲಾಯಿತು. ಈ ಶಿಬಿರದಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು, ಕುಲಸಚಿವರು ಭಾಗವಹಿಸಿದ್ದು, ಸುಮಾರು 250 ಕ್ಕೂ ಹೆಚ್ಚು ವಿದ್ಯಾರ್ಥಿ/ವಿದ್ಯಾರ್ಥಿನಿಯರು ರಕ್ತದಾನ ಮಾಡುವುದರ ಮೂಲಕ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

ದಿನಾಂಕ 08-04-2019ರಂದು ಜಾಗತಿಕ ಆರೋಗ್ಯ ದಿನದ ಅಂಗವಾಗಿ ಡಾ. ರಹಮತ್‌ಪಾಶಾರವರು ಗಿಡಮೂಲಿಕೆಗಳು, ಹಣ್ಣು ತರಕಾರಿಗಳು, ಶುದ್ಧ ನೀರು, ಶುದ್ಧವಾದ ಗಾಳಿ ಹೀಗೆ ಪ್ರಕೃತಿದತ್ತವಾಗಿ ದೊರೆಯುವ ಸವತಲತ್ತುಗಳನ್ನು ಬಳಸಿಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಬಗ್ಗೆ ವಿದ್ಯಾರ್ಥಿಗಳಿಗೆ ಇವಗಳ ಮಹತ್ವನ್ನು ತಿಳಿಸಿಕೊಟ್ಟರು.

ದಿನಾಂಕ 15-04-2019ರಂದು ಡಾ. ಅಂಬೇಡ್ಕರ್ ಜಯಂತಿ ಪ್ರಯುಕ್ತ ಸದೃಢ ಸಮಾಜ ನಿರ್ಮಾಣದಲ್ಲಿ ಯುವಜನತೆಯ ಪಾತ್ರ ಕುರಿತು ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಹೀಗೆ ನಮ್ಮ ಕಾಲೇಜಿನ ಯುವ ರೆಡ್‌ಕ್ರಾಸ್ ಘಟಕವು ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ಕಾರ್ಯಕ್ರಮಗಳನ್ನು ನಡೆಸಿಕೊಡುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿಕೊಂಡು ಅದನ್ನು ಯಶಸ್ವಿಯಾಗಿ ನೆರವೇರಿಸಿಕೊಂಡು ಬರುತ್ತಿರುವುದಲ್ಲದೆ ಸ್ವಯಂ ಸೇವಾ ಪ್ರವೃತ್ತಿಯನ್ನು ಬೆಳೆಸಿಕೊಳ್ಳಲು ಹಾಗೂ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗಾಗಿ ಯುವರೆಡ್‌ಕ್ರಾಸ್ ಘಟಕವು ಶ್ರಮಿಸುತ್ತಾ ಬಂದಿದೆ.


**-ಡಾ. ಡೈಸಿ ಜಾಸ್ಮಿನ್ ಜಾರ್ಜ್**
ಕಾರ್ಯಕ್ರಮಾಧಿಕಾರಿಗಳು
ಯುವ ರೆಡ್ ಕ್ರಾಸ್ ಘಟಕ






Scanned with OKEN Scanner

# 2018–19ನೇ ಸಾಲಿನ ಕ್ರೀಡಾ ವರದಿ




**ಕೆ. ಲಕ್ಷ್ಮಣಪ್ಪ**
ದೈಹಿಕ ಶಿಕ್ಷಣ ನಿರ್ದೇಶಕರು

## 2018–19ನೇ ಸಾಲಿನ ಕಾಲೇಜಿನ ಪ್ರತಿಭಾವಂತ ಕ್ರೀಡಾ ವಿದ್ಯಾರ್ಥಿಗಳು




ವಿನಯ್




ಉದಯಕುಮಾರ್




ಅಂಕಿತ



ವಿಜಯ್



ಸಾಗರ್



ತಸ್ಮೀಯಾ




ಅನನ್ಯ



ಪುನಿತ್



ಶರತ್‌ಕುಮಾರ್



ಭರತ್

ಕುವೆಂಪು ವಿಶ್ವವಿದ್ಯಾಲಯ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ ಇದರ ವತಿಯಿಂದ ನಡೆದ 2018–19ನೇ ಸಾಲಿನ ವಿಜ್ಞಾನ ಪರಿಷತ್ ಮತ್ತು ಕ್ರೀಡಾ ವಿಭಾಗದ ಸಮಾರೋಪ ಸಮಾರಂಭಕ್ಕೆ ಭಾಗವಹಿಸಿರುವ ತಮ್ಮೆಲ್ಲರಿಗೂ ನನ್ನ ನಮನಗಳು. ಕಾವೇರಿಯಿಂದ ಗೋದಾವರಿ ವರಮಿರ್ದ ಕರುನಾಡೊಳ್ ಸಹ್ಯಾದ್ರಿ ತಪ್ಪಲಂ ಉಳ್ಳ ನಾಡೊಳ್ ಹಚ್ಚಹಸಿರಿನ ಮಲೆನಾಡ ತಪ್ಪಲಿನ ನಡುವೆ ಜನಿಸಿದ, ಸಹ್ಯಾದ್ರಿ ಜ್ಞಾನ ದೇಗುಲದಲ್ಲಿ ಹೊರಹೊಮ್ಮುವ ಮಕರಂದವನು ಹೊರಸೂಸುವ ಹಸುಳೆಗಳು ನಾವೆಲ್ಲ.

2018–19ನೇ ಸಾಲಿನ ಕ್ರೀಡಾ ವಿಭಾಗದ ಪ್ರಾರಂಭಿಕ ಸಭೆಯನ್ನು ಡಾ. ಶಶಿರೇಖಾ ಕೆ.ಆರ್. ಪ್ರಾಂಶುಪಾಲರು ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. 2018–19ನೇ ಸಾಲಿನ ಕ್ರೀಡಾವಿಭಾಗದ ಸಲಹಾ ಸಮಿತಿಯನ್ನು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು.



Scanned with OKEN Scanner

ಸಮಿತಿಯ ಸದಸ್ಯರು

| | | |
|---|---|---|
| ಡಾ. ಶಶಿರೇಖಾ ಕೆ.ಆರ್. ಪ್ರಾಂಶುಪಾಲರು | - | ಅಧ್ಯಕ್ಷರು |
| ಡಾ. ನಟರಾಜ್ | - | ಸದಸ್ಯರು |
| ಡಾ. ಸಿ.ಕೆ ರಮೇಶ್ | - | ಸದಸ್ಯರು |
| ಡಾ ಕೆ.ಪಿ. ಲತಾ | - | ಸದಸ್ಯರು |
| ಡಾ. ಶ್ರೀಕಂಠ | - | ಸದಸ್ಯರು |
| ಕೆ.ಸಿ. ಶಿವಣ್ಣ | - | ಸದಸ್ಯರು |
| ಕೆ. ಲಕ್ಷ್ಮಣಪ್ಪ | - | ಸದಸ್ಯ ಕಾರ್ಯದರ್ಶಿ |
| ವಿಜಯ ಹೆಚ್.ಎಸ್. | - | ಅಧೀಕ್ಷರು |
| ಕಿರಣ್ | - | ವಿದ್ಯಾರ್ಥಿ ಪ್ರತಿನಿಧಿ |

**ಸಭೆಯ ನಿರ್ಣಯಗಳು:-**

1 2018-19ನೇ ಸಾಲಿನ ವಿವಿಧ ಕ್ರೀಡಾ ಸ್ಪರ್ಧೆಗಳಿಗೆ ಉತ್ತೇಜನ ನೀಡುವುದು.

2 ಕುವೆಂಪು ವಿಶ್ವವಿದ್ಯಾಲಯದ ಅಂತರ ಕಾಲೇಜುಗಳ ಅಥ್ಲೇಟಿಕ್ಸ್ ಕ್ರೀಡಾಕೂಟವನ್ನು ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

3. ಅಂತರ್ ವಿಶ್ವವಿದ್ಯಾಲಯ ಮಟ್ಟದಲ್ಲಿ ಸ್ಥಾನ ಗಳಿಸಿದವರಿಗೆ ಪ್ರಶಸ್ತಿ ಪ್ರದಾನ ಮಾಡುವುದಾಗಿ ತೀರ್ಮಾನಿಸಲಾಯಿತು.

ದಿನಾಂಕ 01 ಆಗಸ್ಟ್ 2018 ರಿಂದ ದಿನಾಂಕ 04 ಆಗಸ್ಟ್ 2018 ರ ವರೆಗೆ ನೆಡೆದ ಕುವೆಂಪು ವಿಶ್ವ ವಿದ್ಯಾವಿದ್ಯಾಲಯದ ಅಂತರ್ ಕಾಲೇಜುಗಳ ಚೆಸ್ ಪಂದ್ಯಾವಳಿಯಲ್ಲಿ ನಮ್ಮ ಕಾಲೇಜು ತಂಡ ಭಾಗವಹಿಸಿ ದ್ವಿತೀಯ ಸ್ಥಾನವನ್ನು ಗಳಿಸಿದೆ.

ದಿನಾಂಕ 16 ಆಗಸ್ಟ್ 2018 ಹಾಗೂ ದಿನಾಂಕ 18 ಆಗಸ್ಟ್ 2018 ರಂದು ನಡೆದ ಕುವೆಂಪು ವಿಶ್ವವಿದ್ಯಾಲಯದ ಶಟಲ್ ಬ್ಯಾಡ್ಮಿಂಟನ್ (shuttle badminton) ಪಂದ್ಯಾವಳಿಯಲ್ಲಿ ನಮ್ಮ ಕಾಲೇಜಿನ ಪರಿಸರ ತಂಡವು 3 ನೇ ಸ್ಥಾನ ಪಡೆದಿರುತ್ತದೆ.

ದಿನಾಂಕ 01 ಸೆಪ್ಟೆಂಬರ್ 2018 ಹಾಗೂ ದಿನಾಂಕ 02 ಸೆಪ್ಟೆಂಬರ್ 2018 ರಂದು ನಡೆದ ಕುವೆಂಪು ವಿಶ್ವವಿದ್ಯಾಲಯ weight lifting ಮತ್ತು power lifting ಸ್ಪರ್ಧೆಯಲ್ಲಿ ದ್ವಿತೀಯ ಬಿ.ಎಸ್ಸಿ ವಿದ್ಯಾರ್ಥಿ ಪ್ರದೀಪ್ 62 ಕೆ.ಜಿ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

ದಿನಾಂಕ 27 ಸೆಪ್ಟೆಂಬರ್ 2018 ಹಾಗೂ ದಿನಾಂಕ 28 ಸೆಪ್ಟೆಂಬರ್ 2018 ರಂದು ನಡೆದ ಕುವೆಂಪು ವಿಶ್ವವಿದ್ಯಾಲಯ Judo ಸ್ಪರ್ಧೆಯಲ್ಲಿ ಸುನಿಲ್ ಬೇಂದ್ರೆ 52 ಕೆ.ಜಿ. ವಿಭಾಗದಲ್ಲಿ ದ್ವಿತೀಯ ಸ್ಥಾನ ಗಳಿಸಿರುತ್ತಾರೆ.

ದಿನಾಂಕ 03 ಅಕ್ಟೋಬರ್ 2018 ಹಾಗೂ ದಿನಾಂಕ 04 ಅಕ್ಟೋಬರ್ 2018 ರಂದು ನಡೆದ ಕುವೆಂಪು ವಿಶ್ವವಿದ್ಯಾಲಯ ಅಂತರ್ ಕಾಲೇಜು ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಭಾಗವಹಿಸಿರುತ್ತಾರೆ.

ದಿನಾಂಕ 26 ಅಕ್ಟೋಬರ್ 2018 ರಿಂದ 28 ಅಕ್ಟೋಬರ್ 2018ರ ವರೆಗೆ ನಡೆದ ಕುವೆಂಪು ವಿಶ್ವವಿದ್ಯಾಲಯ Athletic ಕ್ರೀಡಾಕೂಟದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿ ಪೂಜಾ ಜಿ. ಓಂಕಾರ್ ದ್ವಿತೀಯ ಸ್ಥಾನ ಪಡೆದಿರುತ್ತಾರೆ.


ದಿನಾಂಕ 07 ಮಾರ್ಚ್ 2019 ಹಾಗೂ ದಿನಾಂಕ 08 ಮಾರ್ಚ್ 2019 ರಂದು ನಡೆದ ಕುವೆಂಪು ವಿಶ್ವವಿದ್ಯಾಲಯ ಅಂತರ್ ಕಾಲೇಜುಗಳ ಶಿವಮೊಗ್ಗ ವಲಯದ ಕ್ರಿಕೇಟ್ ಪಂದ್ಯಾವಳಿಯಲ್ಲಿ ನಮ್ಮ ಕಾಲೇಜು ಉತ್ತಮ ಪ್ರದರ್ಶನ ನೀಡಿರುತ್ತದೆ.

ಕ್ರೀಡಾ ವಿಭಾಗದ ವತಿಯಿಂದ ಏರ್ಪಡಿಸಿದ್ದ ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಭಾಗವಹಿಸಿರುತ್ತಾರೆ ಎಂಬುದಾಗಿ ತಿಳಿಸುತ್ತಾ ಈ ಪಂದ್ಯಾವಳಿಗಳಿಗೆ ಸಹಕರಿಸಿದ ಪಾಂಶುಪಾಲರಿಗೆ, ಉಪನ್ಯಾಸಕರಿಗೆ, ವಿದ್ಯಾರ್ಥಿಗಳಿಗೆ ಕ್ರೀಡಾ ವಿಭಾಗದ ಧನ್ಯವಾದಗಳು.

– ಕೆ. ಲಕ್ಷ್ಮಣಪ್ಪ

ದೈಹಿಕ ಶಿಕ್ಷಣ ನಿರ್ದೇಶಕರು

# ಪ್ರತಿಭಾ ಪುರಸ್ಕಾರ 2018–19




**DYSP ಶ್ರೀಯುತ ಶೇಖರ್, ಶ್ರೀ ಪ್ರಸಾದ್ ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರು, ವಿಶ್ವವಿದ್ಯಾನಿಲಯ ಪರೀಕ್ಷಾಂಗ ಕುಲಸಚಿವರಾದ ಡಾ. ರಾಜಾನಾಯ್ಕ, ಹಣಕಾಸು ಅಧಿಕಾರಿಗಳಾದ ಡಾ. ಹಿರೇಮಣಿ ನಾಯ್ಕ, ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಾದ ಡಾ. ಶಶಿರೇಖಾ ಕೆ.ಆರ್.**

ನಮ್ಮ ಸಹ್ಯಾದ್ರಿ ವಿಜ್ಞಾನ ಕಾಲೇಜು ಕಳೆದ ಹಲವಾರು ವರ್ಷಗಳಿಂದ ವಿದ್ಯಾರ್ಥಿಗಳ ಬೆಳವಣಿಗೆ ಹಾಗೂ ಸಾಮಾಜಿಕ ಅಭಿವೃದ್ಧಿಯ ಉದ್ದೇಶ ಹೊಂದಿದ ಅತ್ಯುತ್ತಮ ಸಂಪ್ರದಾಯಗಳನ್ನು ಪಾಲಿಸುತ್ತಾ ಬಂದಿದೆ. ಅಂಥ ಸಂಪ್ರದಾಯಗಳಲ್ಲಿ ಪ್ರತೀ ವರ್ಷ ಬೇರೆ ಬೇರೆ ವಿಷಯಗಳಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಿ ಸಾಧನೆಮಾಡಿದ ವಿದ್ಯಾರ್ಥಿಗಳನ್ನು ಗುರುತಿಸಿ ಪುರಸ್ಕರಿಸುವ ಕಾರ್ಯಕ್ರಮವೂ ಒಂದು. 'ಪ್ರತಿಭಾ ಪುರಸ್ಕಾರ' ಎಂಬ ಅರ್ಥಪೂರ್ಣ ಹೆಸರಿನಲ್ಲಿ ಕಳೆದ ೩೮ ವರ್ಷಗಳಿಂದ ನಿರಂತರವಾಗಿ ನಡೆಯುತ್ತಾ ಬಂದಿರುವ ಈ ಕಾರ್ಯಕ್ರಮ ವಿದ್ಯಾರ್ಥಿಗಳ ಸಾಧನೆಗೆ ಬಹುದೊಡ್ಡ ಪ್ರೇರಕ ಶಕ್ತಿಯಾಗಿದೆ. ಈ ಕಾರ್ಯಕ್ರಮವು ಪ್ರಮುಖವಾದ ಐದು ವಿಶೇಷತೆಗಳನ್ನು ಒಳಗೊಂಡಿದೆ. ಅವುಗಳಲ್ಲಿ ಮೊದಲನೆಯದು, ಈ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಾಂಶುಪಾಲರಾದ ಡಾ. ಶಶಿರೇಖ ಕೆ.ಆರ್ ಅವರು ತೃತೀಯ ವರ್ಷದ ಪದವಿಯಲ್ಲಿ ಅತ್ಯುತ್ತಮವಾಗಿ ಅಂಕ ಗಳಿಸಿದ ವಿದ್ಯಾರ್ಥಿಗೆ ಪ್ರಥಮ ನಗದು ಬಹುಮಾನ ನೀಡುವುದು. ಎರಡನೆಯದು, ಈ ಕಾರ್ಯಕ್ರಮದಲ್ಲಿ ಪಾಠ ಹೇಳಿದ ಅಧ್ಯಾಪಕರು ತಮ್ಮ ವಿದ್ಯಾರ್ಥಿಗಳನ್ನು ಗುರುತಿಸಿ ಸನ್ಮಾನಿಸುವುದು. ಮೂರನೆಯದು, ಎಲ್ಲಾ ಅಧ್ಯಾಪಕರು ತಮ್ಮ ತನು ಮನ ಧನಗಳ ನೆರವನ್ನು ನೀಡಿ ನಡೆಸುತ್ತಿರುವ ಕಾರ್ಯಕ್ರಮ ಇದಾಗಿದೆ. ನಾಲ್ಕನೆಯದು, ಅಧ್ಯಾಪಕೇತರ ನೌಕರರು ಕೂಡ ಇದರಲ್ಲಿ ಪಾಲುದಾರರಾಗಿದ್ದಾರೆ. ಐದನೆಯದು, ಈಗ ಕರ್ತವ್ಯ ನಿರ್ವಹಿಸುತ್ತಿರುವವರು ಮಾತ್ರವಲ್ಲದೆ ಈ ಹಿಂದೆ ಕರ್ತವ್ಯ ನಿರ್ವಹಿಸಿ ನಿವೃತ್ತರಾದ ಹಾಗೂ ಬೇರೆಡೆಗೆ ವರ್ಗಾವಣೆಗೊಂಡ ಅಧ್ಯಾಪಕರು ಹಾಗೂ ಅಧ್ಯಾಪಕೇತರ ಬಂಧುಗಳು ಕೂಡ ಇದರಲ್ಲಿ ಸಹಾಯಾಸ್ತದೊಂದಿಗೆ ನಡೆಸುತ್ತಿರುವ ಕಾರ್ಯಕ್ರಮ ಇದಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ಇದೊಂದು ವಿಶೇಷ ಕಾರ್ಯಕ್ರಮವಾಗಿ ಯಶಸ್ವಿ ಹೆಜ್ಜೆಗಳನ್ನು ಇಡುತ್ತಾ ಬಂದಿದೆ.

ಇಂಥ ಪರಂಪರೆಯಿರುವ ಈ ವರ್ಷದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜನೆಗೆ ಕಾಲೇಜಿನ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸಮಿತಿಯನ್ನು ರಚಿಸಲಾಗಿತ್ತು

| | |
|---|---|
| ಪ್ರೊ. ಕೆ.ಆರ್. ಶಶಿರೇಖಾ, ಪ್ರಾಂಶುಪಾಲರು | ಅಧ್ಯಕ್ಷರು |
| ಡಾ. ಎನ್.ರಾಜೇಶ್ವರಿ, ಅಧ್ಯಾಪಕ ಕಾರ್ಯದರ್ಶಿ | ಉಪಾಧ್ಯಕ್ಷರು |
| ಡಾ. ಎಸ್.ಎಂ. ಮುತ್ತಯ್ಯ, ಸಹಾಯಕ ಪ್ರಾಧ್ಯಾಪಕರು | ಸಂಚಾಲಕರು |
| ಪ್ರೊ. ಸಾಯೀಶ್ವರ ಎಚ್.ಎ, ಸಹಾಯಕ ಪ್ರಾಧ್ಯಾಪಕರು | ಸಹ–ಸಂಚಾಲಕರು |



Scanned with OKEN Scanner

| | |
|---|---|
| ಡಾ.ಪಿ.ವೆಂಕಟೇಶ, ಸಹಾಯಕ ಪ್ರಾಧ್ಯಾಪಕರು | ಸಹ-ಸಂಚಾಲಕರು |
| ಡಾ. ಪವಿತ್ರ ಜಿ.ಎಂ., ಸಹಾಯಕ ಪ್ರಾಧ್ಯಾಪಕರು | ಸದಸ್ಯರು |
| ಡಾ. ಸುಬ್ರಹ್ಮಣ್ಯ.ಕೆ, ಸಹಾಯಕ ಪ್ರಾಧ್ಯಾಪಕರು | ಸದಸ್ಯರು |
| ಡಾ. ವರುಣ ಕುಮಾರ ಜಿ.ಬಿ, ಸಹಾಯಕ ಪ್ರಾಧ್ಯಾಪಕರು | ಸದಸ್ಯರು |
| ಡಾ. ಜಿ.ಕೆ. ಪ್ರೇಮಾ, ಅಧ್ಯಾಪಕರು | ಸದಸ್ಯರು |
| ಶ್ರೀ. ಕೆ.ಸಿ.ಶಿವಣ್ಣ,ಅಧ್ಯಾಪಕರು | ಸದಸ್ಯರು |
| ಶ್ರೀ. ಪ್ರಮೋದ್ ಶಿಂಗೆ, ಅಧ್ಯಾಪಕರು | ಸದಸ್ಯರು |
| ಕು. ಉಜ್ವಲ, ಅಧ್ಯಾಪಕರು | ಸದಸ್ಯರು |
| ಕು. ಮಧುರ, ಅಧ್ಯಾಪಕರು | ಸದಸ್ಯರು |
| ಶ್ರೀ ಗಣಪತಿ ಕಾಮತ್, ಗಣಕ ನಿರ್ವಾಹಕ | ಸದಸ್ಯರು |

ಈ ಸಮಿತಿಯು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಹಲವಾರು ಸಭೆಗಳನ್ನು ನಡೆಸಿ ವ್ಯವಸ್ಥಿತವಾದ ಸಿದ್ಧತೆಗಳೊಂದಿಗೆ ದಿನಾಂಕ ೧೧.೦೩.೨೦೧೯ ರ ಮಂಗಳವಾರ ಸಿ.ಎನ್.ಆರ್. ರಾವ್ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಕಾರ್ಯಕ್ರಮದ ಉದ್ಘಾಟನೆಗಾಗಿ ಶಿವಮೊಗ್ಗಕ್ಕೆ ಹೊಸದಾಗಿ ಆಗಮಿಸಿದ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಾದ ಡಾ. ಎಂ. ಅಶ್ವಿನಿ ಅವರನ್ನು, ಮುಖ್ಯ ಅತಿಥಿಗಳಾಗಿ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರೊ. ಕೆ.ಪ್ರಸಾದ್, ಕುವೆಂಪು ವಿಶ್ವವಿದ್ಯಾಲಯದ ಪರೀಕ್ಷಾಂಗ ಕುಲಸಚಿವರಾದ ಡಾ.ರಾಜಾನಾಯಕ, ಹಣಕಾಸು ಅಧಿಕಾರಿಗಳಾದ ಡಾ. ಹಿರೇಮಣಿನಾಯ್ಕ ಅವರುಗಳನ್ನು ಆಹ್ವಾನಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮೊದಲಿಗೆ ಸಂಚಾಲಕರಾದ ಡಾ. ಎಸ್.ಎಂ. ಮುತ್ತಯ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಭಾರತ ದೇಶ ಗುರು ಶಿಷ್ಯರ ಭವ್ಯ ಪರಂಪರೆಯನ್ನು ಹೊಂದಿದ್ದು, ಜಗತ್ತಿಗೆ ಗುರು ಶಿಷ್ಯರ ಸಂಬಂಧಗಳನ್ನು ಕಲಿಸಿದ ಕೀರ್ತಿ ನಮ್ಮ ದೇಶಕ್ಕೆ ಸಲ್ಲುತ್ತದೆ. ಇಂಥ ಪರಂಪರೆಯ ಮುಂದುವರಿಕೆಯಾಗಿ ನಮ್ಮ ಕಾರ್ಯಕ್ರಮ ರೂಪುಗೊಂಡಿರುವುದು ನಮಗೆಲ್ಲ ಹೆಮ್ಮೆಯ ಸಂಗತಿ ಎಂಬುದನ್ನು ಹೇಳಿದರು. ಹಾಗೆಯೇ ಈ ವರ್ಷದಲ್ಲಿ ೨೦೧೭-೧೮ ನೇ ವರ್ಷದ ಬಿ.ಎಸ್ಸಿ, ಬಿಎಸ್ಸಿ(ಆನರ್ಸ್), ಬಿಸಿಎ ಪದವಿಯ ವಿವಿಧ ವಿಷಯಗಳಲ್ಲಿ ಅತೀ ಹೆಚ್ಚು ಅಂಕಗಳಿಸಿದ ಸುಮಾರು ೧೪೦ ವಿದ್ಯಾರ್ಥಿಗಳು ಪುರಸ್ಕಾರಕ್ಕೆ ಅರ್ಹರಾಗಿದ್ದಾರೆ ಎಂಬ ಮಾಹಿತಿಯನ್ನು ನೀಡಿದರು. ಹಾಗೆಯೇ ಕಾರ್ಯಕ್ರಮದಲ್ಲಿ ಹಾಜರಿದ್ದ ಎಲ್ಲಾ ಆಹ್ವಾನಿತ ಗಣ್ಯರನ್ನು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಹಾಗೂ ಅವರ ಪೋಷಕರನ್ನು, ಅಧ್ಯಾಪಕ ವರ್ಗದವರನ್ನು, ಮಾಧ್ಯಮದ ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಕಾರ್ಯಕ್ರಮದ ಉದ್ಘಾಟನೆ ಮಾಡಬೇಕಿದ್ದ ಜಿಲ್ಲಾ ವರಿಷ್ಠಾಧಿಕಾರಿ ಡಾ.ಎಂ.ಅಶ್ವಿನಿ ಅವರ ಪ್ರತಿನಿಧಿಯಾಗಿ ಆಗಮಿಸಿದ್ದ ಹೆಚ್ಚುವರಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಕಾರ್ಯಕ್ರಮವನ್ನು ಡಾ. ಎಚ್.ಟಿ. ಶೇಖರ್, ಅವರು ಉದ್ಘಾಟಿಸಿ ಮಾತನಾಡಿದರು. ಅವರು ~~ಮಾತನಾಡುತ್ತಾ~~ ಪ್ರತಿಭಾ ~~ಪುರಸ್ಕಾರ ಕಾರ್ಯಕ್ರಮದ~~ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ವಿದ್ಯಾರ್ಥಿಗಳು ಇಡುವ ಮುಂದಿನ ಭವಿಷ್ಯದ ಹೆಜ್ಜೆಗಳು ಹೇಗಿರಬೇಕು ಎಂಬುದನ್ನು ತಮ್ಮ ಜೀವನದ ಸಾಧನೆಗಳೊಂದಿಗೆ ಮೇಳೈಸಿ ವಿವರಿಸಿದರು. ಹಾಗೆಯೇ ಸಾಧನೆ ಮಾಡಿದ ವಿದ್ಯಾರ್ಥಿಗಳು ಈ ಪುರಸ್ಕಾರದಿಂದ ಇನ್ನಷ್ಟು ಪ್ರೇರಣೆ ಪಡೆದು ಸಾಧನೆ ಮುಂದುವರಿಸಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರೊ. ಕೆ. ಪ್ರಸಾದ್ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ವಿಜ್ಞಾನದ ಬೆಳವಣಿಗೆಗಳು ಸಾಕಷ್ಟು ದೊಡ್ಡಪ್ರಮಾಣದಲ್ಲಿ ಪ್ರಚಲಿತವಿರುವ ಈ ದಿನಗಳಲ್ಲಿ ವಿದ್ಯಾರ್ಥಿಗಳು ಅವುಗಳನ್ನು ಸಮರ್ಥವಾಗಿ



Scanned with OKEN Scanner

ಸದುಯೋಗಪಡಿಸಿಕೊಳ್ಳಬೇಕೆಂದು ಹೇಳಿದರು. ಮೊಬೈಲ್ ನಂಥ ಸಾಧನ ವಿದ್ಯಾರ್ಥಿಗಳಿಗೆ ಸಾಕಷ್ಟು ಉನ್ನತ ಜ್ಞಾನ ನೀಡಬಲ್ಲ ಸಾಧನವಾಗಿದೆ. ಆದರೆ ವಿದ್ಯಾರ್ಥಿಗಳು ಅದನ್ನು ಕೇವಲ ಮನೋರಂಜನಾ ಸಾಧನವಾಗಿ ಮಾತ್ರ ಬಳಸುತ್ತಿರುವುದು ಸರಿಯಲ್ಲ ಎಂಬುದನ್ನು ತಿಳಿ ಹೇಳಿದರು. ವಿದ್ಯಾರ್ಥಿಗಳು ಕೇವಲ ಸಣ್ಣ ಪುಟ್ಟ ಉದ್ಯೋಗಗಳಿಗೆ ಸೀಮಿತವಾಗದೆ ಐಎಎಸ್ ಐಪಿಎಸ್ ಮೊದಲಾದ ಉನ್ನತ ಹುದ್ದೆಗಳನ್ನು ಪಡೆಯುವ ಪ್ರಯತ್ನವನ್ನು ನಡೆಸಬೇಕು ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕುವೆಂಪು ವಿಶ್ವವಿದ್ಯಾಲಯದ ಪರೀಕ್ಷಾಂಗ ಕುಲಸಚಿವರಾದ ಪ್ರೊ.ರಾಜಾನಾಯಕ ಅವರು ಪುರಸ್ಕಾರ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದರು. ಹಣಕಾಸು ಅಧಿಕಾರಿಗಳಾದ ಪ್ರೊ. ಹಿರೇಮಣಿನಾಯ್ಕ್ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸುವ ಈ ಕಾರ್ಯಕ್ರಮ ಅಭಿನಂದನೀಯ ಎಂದರು . ಮುಂದುವರಿದು ಪ್ರಶಸ್ತಿಪಡೆದ ವಿದ್ಯಾರ್ಥಿಗಳು ಇಂದಿನಿಂದ ಇನ್ನೂ ಹೆಚ್ಚಿನ ಜವಾಬ್ದಾರಿಯನ್ನು ನಿಭಾಯಿಸಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಅಧ್ಯಾಪಕ ಕಾರ್ಯದರ್ಶಿ ಡಾ.ಎನ್.ರಾಜೇಶ್ವರಿ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ವರ್ಷದಿಂದ ವರ್ಷಕ್ಕೆ ತನ್ನ ರಂಗನ್ನು ಹೆಚ್ಚು ಮಾಡಿಕೊಳ್ಳುತ್ತಿದೆ. ವಿದ್ಯಾರ್ಥಿಗಳು ಈ ಪುರಸ್ಕಾರದ ಸಂಭ್ರಮವನ್ನು ಅನುಭವಿಸುತ್ತಲೆ ಇದರ ಹಿಂದೆ ಇರುವ ಮೌಲ್ಯಗಳ ಬಗ್ಗೆಯೂ ಸ್ವಲ್ಪ ಯೋಚಿಸಬೇಕಿದೆ ಎಂದರು. ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಇತಿಹಾಸವನ್ನು ಸಭಿಕರಿಗೆ ನೆನಪಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಪ್ರೊ. ಕೆ.ಆರ್.ಶಶಿರೇಖಾ ಅವರು ಪುರಸ್ಕಾರ ಪಡೆದ ವಿದ್ಯಾರ್ಥಿಗಳನ್ನು ಹಾಗೂ ಅವರ ಪೋಷಕರನ್ನು ಕುರಿತು ಮೆಚ್ಚುಗೆಯ ಮಾತುಗಳನ್ನು ಆಡಿದರು. ಹಾಗೆಯೇ ಪೋಷಕರು ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನು ಕೊಡಿಸುವಾಗ ಯಾವುದು ಸರಿ ಯಾವುದು ಸರಿಯಲ್ಲ ಎಂಬುದನ್ನು ಯೋಚಿಸುವುದು ತುಂಬಾ ಅಗತ್ಯವಾಗಿದೆ ಎಂಬ ಕಿವಿಮಾತನ್ನು ಹೇಳಿದರು.

ಸಮಾರಂಭದಲ್ಲಿ ಒಟ್ಟು ಸುಮಾರು ೧೪೦ ಕ್ಕೂ ಹೆಚ್ಚಿನ ಸಾಧಕ ವಿದ್ಯಾರ್ಥಿಗಳಿಗೆ ನಗದು ಹಾಗೂ ಪುರಸ್ಕಾರ ಪ್ರಮಾಣ ಪತ್ರಗಳನ್ನು ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕೆ.ಸಿ ಶಿವಣ್ಣ ಅವರು ವಂದಿಸಿದರು. ಡಾ. ನಾಗರಾಜ ಪರಿಸರ ಅವರು ನಿರೂಪಿಸಿದರು. ಕು. ನೈದಿಲೆ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಸದಸ್ಯರು ವಿದ್ಯಾರ್ಥಿಗಳ ಪಟ್ಟಿಯನ್ನು ಓದಿದರು. ಕಾಲೇಜಿನ ಎಲ್ಲಾ ಅಧ್ಯಾಪಕ ಹಾಗೂ ಅಧ್ಯಾಪಕೇತರ ಸಿಬ್ಬಂಧಿ ಹಾಗೂ ವಿದ್ಯಾರ್ಥಿಗಳಿಗೆ ವಿಶೇಷ ಬಹುಮಾನಗಳನ್ನು ನೀಡಿದ ಮೈಸೂರಿನ ಶ್ರೀನಿವಾಸಮೂರ್ತಿ, ನಗದು ಬಹುಮಾನ ನೀಡಿದ ನಿವೃತ್ತ ಪ್ರಾಧ್ಯಾಪಕರು ಹಾಗೂ ನೌಕರರು ಹಾಜರಿದ್ದರು. ಒಟ್ಟಿನಲ್ಲಿ ಇಡೀ ಕಾರ್ಯಕ್ರಮವು ಚಂದದಾಗಿ ರೂಪುಗೊಳ್ಳುವದರ ಮೂಲಕ ಪರಿಸಮಾಪ್ತಿ ಪಡೆದುಕೊಂಡಿತು.

**-ಡಾ. ಎಸ್.ಎಂ. ಮುತ್ತಯ್ಯ**
ಸಂಚಾಲಕರು
ಪ್ರತಿಭಾ ಪುರಸ್ಕಾರ ಸಮಿತಿ

# ರೋವರ್ಸ್ ಮತ್ತು ರೆಂಜರ್ಸ್ ಘಟಕದ 2018–19ರ ವರದಿ.



ನಾಯಕತ್ವ ಮತ್ತು ಕಲಿಕೆ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಹುಟ್ಟಿನಿಂದ ಯಾರು ನಾಯಕರಾಗಿರುವುದಿಲ್ಲ. ಅವನಲ್ಲಿ ನಾಯಕತ್ವದ ಗುಣ ಬೆಳೆಯಬೇಕಾದರೆ ಅದಕ್ಕೆ ಬೇಕಾದ ಪೂರಕವಾದ ವಾತವರಣವನ್ನು ಕಲ್ಪಿಸಬೇಕಾಗುತ್ತದೆ. ಅಂತಹ ಒಂದು ಕೆಲಸವನ್ನು ರೋವರ್ಸ್ ಮತ್ತು ರೇಂಜರ್ಸ್ ಘಟಕವು ಒದಗಿಸುತ್ತದೆ. ಇದರಲ್ಲಿ ಎಂಟು ವಿದ್ಯಾರ್ಥಿಗಳ ತಂಡವನ್ನು ರಚಿಸಿ, ಪ್ರತಿ ಒಬ್ಬರಿಗು **'ನಾಯಕತ್ವ'** ನೀಡಲಾಗುವುದು.

ಇಂತಹ ಸದಾವಕಾಶಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಆತ್ಮಗೌರವ, ಇತರರೊಡನೆ ಕೂಡಿ ಬಾಳುವ, ಉತ್ತಮ ಪ್ರಪಂಚ ನೋಡುವ ಬಯಕೆ ಹೊಂದುವುದು, ಆಶವಾದಿಯಾಗಿರುವುದು, ಧೈರ್ಯವಂತನಾಗಿರುವದು, ನಂಬಿಕಸ್ತನಾಗಿರುವುದು ಇಂತಹ ಗುಣಗಳನ್ನು ಅರಗಿಸಿಕೊಂಡು ಉತ್ತಮ ನಾಯಕ ಅಥವಾ ನಾಯಕಿಯಾಗಿ ಹೊರಹೊಮ್ಮುವುದು ಇದರ ಮೂಲ ಉದ್ದೇಶವಾಗಿದೆ.

ಒಬ್ಬ ವ್ಯಕ್ತಿಯ ಭೌತಿ ಹಾಗೂ ಭೌದ್ಧಿಕ ಬೆಳವಣಿಗೆಗೆ ರೋವರ್ಸ್ ಮತ್ತು ರೇಂಜರ್ಸ್ ಘಟಕಗಳು ಮಾರ್ಗದರ್ಶಿಯಾಗಲಿವೆ. ಇದರಲ್ಲಿ ಸ್ಕೌಟ್ ಮತ್ತು ಗೈಡ್‌ನ ಪ್ರಾರ್ಥನೆ, ಧ್ವಜಗೀತೆ, ರಾಷ್ಟ್ರಗೀತೆಯನ್ನು ಹಾಡುವುದು. ಸ್ಕೌಟ್ ನಿಯಮಗಳನ್ನು ಕಲಿಯುವುದು, ಜನ ಸಮುದಾಯದ ಸೇವೆಯನ್ನು ಮಾಡುವುದು, ಯುದ್ಧಕಾಲದಲ್ಲಿ ಗಾಯಗೊಂಡ ಸೈನಿಕರಿಗೆ ಶುಶ್ರೂಶೆ ಮಾಡುವುದು ಒಟ್ಟಾರೆಯಾಗಿ ಇದು ವಿಶ್ವ ಮಟ್ಟದ ಸಂಘಟನೆಯಾಗಿರುತ್ತದೆ. ಬೇಡನ್ ಪೋವೆಲ್‌ರು ಈ ಸಂಘಟನೆಯ ಮುಖ್ಯ ರುವಾರಿಯಾಗಿದ್ದು "ಮನುಜ ಮತದ ಸರ್ವಾಂಗಿಣ ಅಭಿವೃದ್ಧಿಯ ಕನಸನ್ನು ನನಸಾಗಿಸುವುದು ರೋವರ್ಸ್ ಮತ್ತು ರೇಂಜರ್ಸ್ ಗಳ ಮುಖ್ಯ ಗುರಿಯಾಗಿರುತ್ತದೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ.



Scanned with OKEN Scanner

2018-19ರ ರೋವರ್ಸ್ ಮತ್ತು ರೆಂಜರ್ಸ್ ಘಟಕದ ಉದ್ಘಾಟನೆಯನ್ನು ದಿನಾಂಕ 26-07-18 ರಂದು ಪ್ರಾಂಶುಪಾಲರಾದ ಪ್ರೊ. ಡಾ. ಶಶಿರೇಖಾ ಕೆ.ಆರ್. ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು. ಉದ್ಘಾಟಕರಾಗಿ ಜಿಲ್ಲಾ ಮುಖ್ಯ ಆಯುಕ್ತರಾದ (ಸ್ಕೌಟ್ ಮತ್ತು ಗೈಡ್) ಶ್ರೀಯುತ ರಮೇಶಶಾಸ್ತ್ರಿಯವರು ಸ್ಕೌಟ್ ಮತ್ತು ಗೈಡ್‌ನಿಂದ ಮಕ್ಕಳ ಬೌದ್ಧಿಕ ಬೆಳವಣಿಗೆ ಹಾಗೂ ಆದರಿಂದಾಗುವ ಲಾಭಗಳ ಬಗ್ಗೆ ಮಕ್ಕಳಿಗೆ ವಿವರವಾಗಿ ತಿಳಿ ಹೇಳಿದರು. ಮುಖ್ಯ ಅತಿಥಿಗಳಾಗಿ ಭಾರತಿಡಯಾಸ್ ಮತ್ತು ನೂರ್‌ಅಹಮದ್ ಉಪಸ್ಥಿತರಿದ್ದರು. ಕಾಲೇಜಿನ ರೋವರ್ ಲೀಡರ್‌ರಾದ ಡಾ. ಶ್ರೀಕಂಠ ಎಸ್.ಎ. ಹಾಗೂ ರೇಂಜರ್ ಲೀಡರ್‌ರಾದ ಡಾ. ಪವಿತ್ರ ಇವರ ಉಪಸ್ಥಿತರಿದ್ದರು. ಸಹ್ಯಾದ್ರಿ ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್ ಘಟಕದ ಚಟುವಟಿಕೆಗಳ ಬಗ್ಗೆ ಡಾ. ಶ್ರೀಕಂಠ ಎಸ್.ಎ. ರವರು ಮಾಹಿತಿ ನೀಡಿದರು.

ದಿನಾಂಕ 29-08-18ರಂದು ರೋವರ್ಸ್ ಮತ್ತು ರೇಂಜರ್ಸ್‌ನ 15 ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ನಿಪುಣ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸಾಧನೆಗೈದಿದ್ದಾರೆ. ದಿನಾಂಕ 17-08-18 ರಂದು 09 ವಿದ್ಯಾರ್ಥಿನಿಯರು ಕೋಲಾರದಲ್ಲಿ ರೇಂಜರ್ಸ್ ಕ್ಯಾಂಪಿನಲ್ಲಿ ಭಾಗವಹಿಸಿರುತ್ತಾರೆ. 02-03-19 ರಂದು ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳು, ಕೆಮ್ಮಣ್ಣ ಗುಂಡಿಗೆ ಹೋಗಿ ಚಾರಣದಲ್ಲಿ ಭಾಗವಹಿಸಿರುತ್ತಾರೆ.

**ಡಾ. ಎಸ್.ಎ. ಶ್ರೀಕಂಠ**
ರೋವರ್ಸ್ ಸಂಯೋಜನಾಧಿಕಾರಿ

**ಡಾ. ಪವಿತ್ರ**
ರೇಂಜರ್ಸ್ ಸಂಯೋಜನಾಧಿಕಾರಿ



# ಆಟಿ ತಿಂಗೊಲ್ದ ಒಂಜಿ ದಿನ :
# ಭಾವ – ಅಭಾವದ ರಿಯಾಲಿಸ್ಟಿಕ್ ಪ್ಲೇ

ಮೋಹನ್ ರಾಕೇಶ್‌ರ 'ಆಷಾಢ್ ಕಾ ಏಕ್ ದಿನ್' ಹಿಂದಿ ಮೂಲದ ನಾಟಕವನ್ನು ಕಲಾಭಾರತಿ ಮುಂಬೈ ಕರ್ನಾಟಕ ಸಂಘ ರಾಷ್ಟ್ರೀಯ ರಂಗ ಉತ್ಸವದಲ್ಲಿ ಡಾ. ಭರತ್ ಕುಮಾರ್ ಪೊಲಿಪು ಅವರ ಅನುವಾದ ಮತ್ತು ನಿರ್ದೇಶನದಲ್ಲಿ 'ಆಟಿ ತಿಂಗೊಲ್ದ ಒಂಜಿ ದಿನ' ಕನ್ನಡದ ಉಪ-ಭಾಷೆ ತುಳು ಭಾಷೆಯಲ್ಲಿ ಪ್ರಯೋಗಗೊಂಡಿತು.

ತಾಯಿ ಅಂಬಿಕಾ ಮಲ್ಲಿಕಾಳಿಗೆ ನೀನು ಕಾಳಿದಾಸನನ್ನು ಪ್ರೀತಿಸುತ್ತಿದ್ದೀಯಾ ಆದರೆ ಅವನು ಭಾವ ಜೀವಿ, ನೀನು ಮನುಷ್ಯನನ್ನು ಪ್ರೀತಿಸು ಎನ್ನುತ್ತಾಳೆ. ಈ 'ಭಾವ– ಅಭಾವ'ದ ಪ್ರಯೋಗ 'ಆಟಿ ತಿಂಗೊಲ್ದ ಒಂಜಿ ದಿನ' ನಾಟಕ ಪ್ರಯೋಗ ಪ್ರೇಕ್ಷಕನನ್ನು ಹಿಡಿದಿಡುವಲ್ಲಿ ಸೋತಿತು. ಕಾಳಿದಾಸನ ಕಾವ್ಯ, ನಾಟಕಗಳು ಪ್ರೇಮ ಕಾವ್ಯಗಳು. ಇಲ್ಲಿ ಕಾಳಿದಾಸನ ವೈಯಕ್ತಿಕ ಬದುಕಿನ ಸಂಗತಿ ಪ್ರೀತಿ ನಾಟಕದ ವಸ್ತು. ನಾಟಕಾಭಿವ್ಯಕ್ತಿ ಪ್ರೇಕ್ಷಕನ ಮೂಲಕ ಜೀವ ನೀಡಿ ಸಂಭವಿಸಲು ತಿಣುಕಿತು. ಸಾಮೂಹಿಕ ಸೃಜನ ಕಾರ್ಯದ ನಾಟಕ ಬೆಳಕಿನ ಆಟ ಸಂವಹನದಲ್ಲಿ ರೀಚ್ ಆಗುತ್ತಿರಲಿಲ್ಲ.

ನೈಜ ರಂಗಭೂಮಿ (Realistic Theatre) ಘಾರಂನಲ್ಲಿ ಮೂಡಿ ಬಂದ ನಾಟಕ ಪ್ರೇಕ್ಷಕರನ್ನು ಕೊನೆವರೆವಿಗೂ ಉಳಿಸಿಕೊಳ್ಳುವಲ್ಲಿ ಸೋತು ರಸ ಶೂನ್ಯಭಾವ ಪ್ರೇಕ್ಷಕರಲ್ಲಿ ಮೂಡಿಸಿತು. ಚುರುಕು ಬೆಳಕಿನಿಂದ ಆರಂಭಗೊಂಡ ನಾಟಕ ಬೆಳಕು ಕೊರತೆಯಲ್ಲಿ ನಿದ್ರಿಸಿತು. ನಾಟಕಕ್ಕೆ ಬೆಳಕು ಮೂಲಭೂತ ಅಗತ್ಯಗಳಲ್ಲಿ ಒಂದು ಎಲ್ಲಿ ಅಭಿನಯವಿರುತ್ತದೋ ಅಲ್ಲಿ ಬೆಳಕು ಬಳಸಿ ಪ್ರೇಕ್ಷಕರನ್ನು ಸೆಳಯಬೇಕಾಗುತ್ತದೆ. ಸೆಟ್ಟಿನ ಹಿಂದೆ ಇಟ್ಟಿದ್ದ ಲೈಟು ಕಣ್ಣಿಗೆ ಕುಕ್ಕುತ್ತಿತ್ತು. ನಟರ ಶಾಬ್ದಿಕ ಅಭಿವ್ಯಕ್ತಿಯ ಕೊರತೆಯು ಒಂದು ಕಾರಣ. ಎರಡು ನಾಟಕದಲ್ಲಿನ ಪಾತ್ರಗಳ ಚುರುಕುತನದ ಕೊರತೆ. ಆದರೆ ನಾಟಕಕಾರರ ನಾಟಕದ ವಸ್ತುವನ್ನು ಪ್ರೇಕ್ಷಕರಿಗೆ ತಲುಪಿಸಿದ್ದು ಒಂದಷ್ಟು ಕಾಲ ನೋಡುವಂತೆ ಮಾಡಿದ್ದು ಸಫಲ ಪ್ರಯತ್ನ. ರಾಮಚಂದ್ರ ಹಡಪದ ಅವರ ರಂಗ ಸಂಗೀತ ಪೂರಕವಾಗಿತ್ತು. ಪಾತ್ರ ಆಯ್ಕೆಗಳು ಹೇಗೆ ಇದ್ದರು ನಾಟಕ ಚುರುಕುತನ ಬೇಡುತಿತ್ತು. ದಂತುಲ ಬರೋವರೆಗೆ ನಾಟಕದ ಟೆಂಪೋ ನಿಧಾನಗತಿಯಲ್ಲಿ ಸಾಗಿತು. ಅನುನಾಸಿಕ, ಅನುಸ್ವಾರ ಪಾತ್ರಗಳಷ್ಟು ಪಾತ್ರಗಳ ಚುರುಕತನ ಇದ್ದರೆ ಇನ್ನಷ್ಟು ಚನ್ನಾಗಿ ಮೂಡಿಬರುತ್ತಿತ್ತು. ನಾಟಕದ ವಸ್ತು ಸಂಸ್ಕೃತ ನಾಟಕಕಾರ ಕಾಳಿದಾಸನ ಕುರಿತ ನಾಟಕ. ಎರಡು ಗಂಟೆಯ ಅವಧಿಯ ಈ ನಾಟಕ ಕಾಳಿದಾಸ ಹಿಮಾಲಯದ ತಪ್ಪಲಿನ ಒಂದು ಹಳ್ಳಿಯಲ್ಲಿ ತನ್ನ ಪ್ರೇಯಸಿ ಮಲ್ಲಿಕಾಳೊಂದಿಗೆ ಶಾಂತಿ ಜೀವನ ನಡೆಸುತ್ತಿರುತ್ತಾನೆ. ಅವನ ಕಾವ್ಯ ಶಕ್ತಿ ಪ್ರತಿಭೆಯಿಂದ ಜನಪ್ರಿಯನಾದ ಕಾಳಿದಾಸ ಪ್ರಿಯಂಗು ಮಂಜರಿ ಎಂಬ ರಾಜ ಮನೆತನದ ರಾಣಿಯನ್ನು ಮದುವೆಯಾಗುತ್ತಾನೆ. ನಂತರ ಸಂಗಾತಿ ಮಲ್ಲಿಕಾಳ ಏಕಾಂಗಿತನ, ವಿಲೋಮನೊಂದಿಗೆ ಮದುವೆ, ಕಾಳಿದಾಸನ ಕಾವ್ಯ ಸೃಷ್ಟಿಯ ಸ್ಥಳವನ್ನು ನೋಡಲು ಮಲ್ಲಿಕಾಳ ಮನೆಗೆ ರಾಣಿ ಬರುತ್ತಾಳೆ. ಇಲ್ಲಿ ರಾಜ್ಯದ ಅಧಿಕಾರಿಗಳು ಸ್ಥಳ ಪರಿಶೀಲನೆಯನ್ನು ಮಾಡುತ್ತಾರೆ. ಕಾಳಿದಾಸನ ಕಾವ್ಯ ಸೃಷ್ಟಿಯ ಮಲ್ಲಿಕಾ, ಬೆಟ್ಟ, ಹಸಿರು ಪ್ರೇರಣೆಯ ಜಾಗ ನೋಡುಲು ರಾಣಿ ಬರುತ್ತಾಳೆ. ಮೂರು ಅಂಕಗಳಲ್ಲಿ ಒಂದೇ ಮನೆಯಲ್ಲಿ ನಾಟಕ ಜರುಗುತ್ತದೆ. ಕಾಳಿದಾಸ ಮಾತೃಗುಪ್ತನಾಗಿ ಪ್ರಿಯಂಗು ಮಂಜರಿಯನ್ನು ಮದುವೆ ಆಗುತ್ತಾನೆ. ಇಲ್ಲಿ ಮಲ್ಲಿಕಾ ವಿಲೋಮನನ್ನು ಮದುವೆಯಾಗಿ ಒಂದು ಹೆಣ್ಣು ಮಗುವನ್ನು ಪಡೆದು ಜೀವನ ನಡೆಸುತ್ತಿರುವ ಕಾಲಕ್ಕೆ ಮತ್ತೆ ಕಾಳಿದಾಸ ತನ್ನ ಹಳೆಯ ಪ್ರೇಮದಲ್ಲಿಯೆ ನೋಡಲು ಬಂದಾಗ ಮಲ್ಲಿಕಾಳಿಗೆ ಮಗು ಇರುವುದು ಗೊತ್ತಾಗಿ ದುಃಖದಿಂದ ಹಿಂದಿರುಗುವ ಭಾಗವನ್ನು ಮೂರು ಅಂಕಗಳಲ್ಲಿ ನಾಟಕ ತನ್ನ ಹಂದರವನ್ನು ನಿರ್ದೇಶಕರು ವಾಸ್ತವವಾದಿ ರಂಗದಲ್ಲಿ ಪ್ರೇಕ್ಷಕರಿಗೆ ದಾಟಿಸುವಲ್ಲಿ ಯಶಸ್ವಿಯಾದರು. ನಟರಲ್ಲಿ ಎನರ್ಜಿ, ನಾಟಕದ ನಿಧಾನಗತಿಯ ಟೆಂಪೋ ಬೆಳಕಿನ ಕೊರತೆಯಲ್ಲಿ ಉತ್ತಮ ನಾಟಕ ಪ್ರಯೋಗದಲ್ಲಿ ನಾಟಕದ ಭಾವ– ಅಭಾವದ ರಿಯಾಲಿಸ್ಟಿಕ್ ಪ್ಲೇ ರಾಷ್ಟ್ರೀಯ ರಂಗ ಉತ್ಸವಕ್ಕೆ ಮೆರಗು ನೀಡಿತು.

**–ರುಚಿತ್ ಕುಮಾರ್**

ದ್ವಿತೀಯ ಬಿ.ಎಸ್ಸಿ.,

## ನಿಮ್ಮ Model ಯಾರು?

ಈ ಪ್ರಶ್ನೆಯನ್ನು ಯಾರಿಗೇ ಕೇಳಿದರೂ, ಸಹ ಅವರವರ ಅಭಿರುಚಿಗೆ ತಕ್ಕಂತೆ ಉತ್ತರಿಸುತ್ತಾ ಹೋಗುತ್ತಾರೆ. ಒಬ್ಬ ದೇಶ ಪ್ರೇಮಿಯನ್ನು ಕೇಳಿದರೆ ಗಾಂಧೀಜಿ, ಒಬ್ಬ ಕ್ರೀಡಾ ಪಟುವನ್ನು ಕೇಳಿದರೆ ಸಚಿನ್, ಒಬ್ಬ ರಾಜಕಾರಣಿ ವಾಜಪೇಯಿ, ಮತ್ತೊಬ್ಬ ಯುವಕ ಅಮಿತಾಬ್ ಬಚ್ಚನ್ ಎನ್ನಬಹುದು. ಹೀಗೆ ಅವರವರ ಆಸಕ್ತಿಯ ಮೇಲೆ ಅವರ modelಗಳು ಆಯ್ಕೆಯಾಗಿರುತ್ತದೆ. ಒಂದೊಂದು ಕ್ಷೇತ್ರದಲ್ಲಿಯೂ ತಮ್ಮ ವ್ಯಕ್ತಿತ್ವವನ್ನು ಅರ್ಥಗರ್ಭಿತವಾಗಿ ವೃದ್ಧಿಸಿಕೊಂಡು, ಆಕರ್ಷಣೆಯ ಕೇಂದ್ರ ಬಿಂದುವಾಗಿ, ತಮ್ಮ ಭಿನ್ನವಾದ ವರ್ಚಸ್ಸಿನಿಂದ ಬೆಳೆಯುವವರು Modelಗಳಾಗಿರುತ್ತಾರೆ. ಈ Modelಗಳನ್ನು ಅರಿಸಿಕೊಳ್ಳುವುದು ತಪ್ಪಲ್ಲ, ನಾವು Modelಗಳನ್ನು ಅವರ ಜೀವನ ಶೈಲಿಯನ್ನು ಇಷ್ಟಪಡುವುದು ಸಹ ತಪ್ಪಲ್ಲ. ಆದರೆ ನಾವು ಅವರಂತೆ ಆಗಲು ಹೋಗಿ ನಾವು ನಮ್ಮ ಸ್ವಂತಿಕೆಯ ಸಮಾಧಿಯ ಮೇಲೆ ಅವರ ಮೂರ್ತಿಯನ್ನು ಇಟ್ಟು ಆರಾಧಿಸುವುದು ತಪ್ಪು. ನಾವು ಯಾವಾಗ ಇನ್ನೊಬ್ಬರನ್ನ ಅನುಸರಿಸುತ್ತಾ ಹೋಗುತ್ತೇವೆಯೋ ಆಗ ನಮ್ಮ ಸ್ವಂತ ಅನಿಸಿಕೆ, ಅಭಿಪ್ರಾಯಗಳಿಗೆ ಬೆಲೆಯೇ ಇರುವುದಿಲ್ಲ. ನಮ್ಮ ಸ್ವಂತಿಕೆ ಕೇವಲ ಮೊಟ್ಟೆಯಾಗಿರುತ್ತದೆ ಹೊರತು ಮರಿಯಾಗಿ ಹೊರ ಬಂದು ಹಾರಾಡುವುದಿಲ್ಲ. ನಾವು ಯಾವಾಗ ಅವನಂತೆ ಆಗಬೇಕು ಅಂತ ಹೋರಾಡುತ್ತೇವೆಯೋ ನಾವು ಅವನಂತೆ ಆಗಬಹುದು. ಆದರೆ ಅವನಿಗಿಂತ ಒಬ್ಬ ಶ್ರೇಷ್ಠ ವ್ಯಕ್ತಿ ನಮ್ಮೊಳಗೆ ಇರಬಹುದಲ್ಲ? ಹೀಗೆ ಯೋಚಿಸಿ ಆತ್ಮ ವಿಶ್ವಾಸದಿಂದ ಮುನ್ನುಗ್ಗಿರುವುರಿಂದಲೇ ಅವರು ನಮಗೆ Modelಗಳಾಗಿರುವುದು. ನಮ್ಮ ಸ್ವಂತಿಕೆಗೆ ಆಗ ನಾವು ಸಹ ಆಕರ್ಷಣೆಯ ಬಿಂದುವಾಗುತ್ತೇವೆ. ಏಕೆಂದರೆ ಆಲೋಚನೆಗಳು, ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತವೆ. ಅನುಸರಣೆ ಬೇಡವೆಂಬುದು ನಮ್ಮ ಗುರಿಯಲ್ಲ "ಅನುಸರಣೆ ಎಂಬುದು ಜೀವನಕ್ಕೆ ಬೇಕು; ಆದರೆ ಅನುಸರಣೆ ಜೀವನವಾಗಬಾರದು". ನಾವು ಯಾವಾಗ ನಮ್ಮನ್ನೇ ಮರೆತು ಅನುಸರಣೆಯಲ್ಲಿ ಮುಳುಗುತ್ತೇವೆಯೋ ಆಗ ನಮ್ಮ ಪ್ರತಿಭೆ ಬೆಳಕಿಗೆ ಬರುವುದಿಲ್ಲ. ಆದ್ದರಿಂದ ಸ್ವಂತಿಕೆ ಎಂಬುದು ತುಂಬಾ ಮುಖ್ಯವಾಗುತ್ತದೆ. ಬೇರೆಯವರ ಆಲೋಚನೆಗಳಿಗೆ, ಅಭಿಪ್ರಾಯಗಳಿಗೆ ಬೆಲೆಕೊಡುತ್ತಾ ನಮ್ಮ ಸ್ವಂತಿಕೆಯನ್ನು ತೋರಿಸುತ್ತಾ ಅನಂತವಾಗಿ ಸಾಗಲು ಸಾಧ್ಯವಿಲ್ಲವೇ?

**–ಎ.ಎಂ. ಹಾಲೇಶ**

IV Sem B. ವಿಭಾಗ (EMCs)

## ಬುದ್ಧನ ತತ್ವಗಳು

ಪ್ರೀತಿ : ಬುದ್ಧ ಭೋದಿಸುವಂತಹ ತತ್ವಗಳು ಪ್ರೀತಿಯ ಸುತ್ತಲೂ ತಿರುಗುತ್ತಾ ಇರುತ್ತವೆ. ಹೃದಯವನ್ನು ತೆರೆಯುತ್ತವೆ ನಮ್ಮ ಹೃದಯದಲ್ಲಿ ಪ್ರೀತಿ ತುಂಬಿದಾಗ ನಕಾರಾತ್ಮಕ ವಿಷಯಗಳಿಗೆ ಯಾವುದೇ ಜಾಗವಿರುವುದಿಲ್ಲ. ಇನ್ನು ವಾಸ್ತವ ಭವಿಷ್ಯದ ಬಗ್ಗೆ ಕನಸು ಕಾಣುವ ಬದಲು ನಮ್ಮ ಹಿಂದಿನ ದಿನಗಳನ್ನು ನೆನೆಸುತ್ತ ಇರುವ ಬದಲು ಯಾವಾಗಲೂ ವರ್ತಮಾನದಲ್ಲಿ ಬದುಕಲು ಕಲಿಯಿರಿ ಎಂದು ಬುದ್ಧ ಹೇಳಿದ್ದಾರೆ. ಈ ಪಾಠದಿಂದ ಉದ್ಯೋಗ ಜಗತ್ತಿನಲ್ಲಿ ನಮ್ಮ ಗುರಿಯನ್ನು ನಾವು ಮುಟ್ಟಬಹುದು ಅಂದರೆ ಮುಂದಿನ ದಿನಗಳ ಬಗ್ಗೆ ಯೋಚನೆ ಮಾಡಬೇಕೆ ಹೊರತು ಕಳೆದುಹೋದ ದಿನಗಳ ಬಗ್ಗೆ ಅಲ್ಲ ಒಳಗಡೆ ನೋಡಿ ನಮ್ಮ ಒಳಗಡೆ ನಿಜವಾದ ಖಜಾನೆಯಿದೆ ಅಂದರೆ ನಮ್ಮ ಹೃದಯದಲ್ಲಿ ಸಿರಿಸಂಪತ್ತು ತುಂಬಿದೆ. ಇದನ್ನು ಹೊರತು ಪಡಿಸಿ ಹೊರಭಾಗದಲ್ಲಿ ಅಲ್ಲ ಅಂತ ಬುದ್ಧ ಹೇಳಿದ್ದಾರೆ. ವೈಭೋಗದ ಜೀವನವನ್ನು ಬಯಸುವವನಿಗೆ ಶಾಂತಿ ಸಿಗುವುದಿಲ್ಲ ತನ್ನೊಳಗೆ ಅದನ್ನು ನೋಡುವವನಿಗೆ ಮಾತ್ರ ಶಾಂತಿ ಸಿಗುತ್ತದೆ ಎಂದು ಬುದ್ಧ ಹೇಳಿದ್ದಾನೆ. ಆಸೆ ಎಲ್ಲ ಆಸೆಗಳನ್ನು ತ್ಯಜಿಸುವುದರಿಂದ ಬೇಗನೆ ಜ್ಞಾನೋದಯ ಪಡೆಯಬಹುದು. ಜ್ಞಾನೋದಯ ಪಡೆಯಬೇಕೆಂಬ ಆಸೆ ಕೂಡ ವೃತ್ತದಲ್ಲಿ ನೀವು ಬಂದಿಯಾಗುವಂತೆ ಮಾಡುತ್ತದೆ ಅಂತ ಹೇಳಿದ್ದಾರೆ.

ಬುದ್ಧಿ : ಈ ಬುದ್ಧಿಯನ್ನು ನಿಯಂತ್ರಿಸಲು ಸಾಧ್ಯವಿಲ್ಲದೆ ಇದ್ದಾಗ ಅದು ನಮ್ಮನ್ನು ನಿಯಂತ್ರಿಸಲು ಶುರುಮಾಡುತ್ತದೆ. ಇದರಿಂದಾಗಿ ನಾವು ಕಷ್ಟಕ್ಕೆ ಸಿಲುಕಿಕೊಳ್ಳುವ ಸಮಯ ಬರುತ್ತದೆ. ಬುದ್ದಿಗೆ ಸರಿಯಾಗಿ ತರಬೇತಿ ನೀಡಿದಾಗ ಅದು ತುಂಬಾ ಶಕ್ತಿಶಾಲಿ ಅಸ್ತ್ರವಾಗಿರುತ್ತದೆ. ಆದರೆ ಅದಕ್ಕೆ ಶಿಸ್ತನ್ನು ಕಲಿಸದೆ ಇದ್ದರೆ ನಾವು ಸುಳಿಗೆ ಸಿಲುಕಿಕೊಳ್ಳುತ್ತೇವೆ. ಅಂತ ಬುದ್ಧ ಹೇಳಿದ್ದಾರೆ ಇದು ತುಂಬಾ ಅಪಾಯಕಾರಿ. ಸಹಾನುಭೂತಿ ಭೂಮಿಯ ಮೇಲೆ ಜೀವ ಇರುವ ಮತ್ತು ಜೀವ ಇಲ್ಲದಿರುವ ಪ್ರತಿಯೊಂದು ವಸ್ತುವಿಗೂ ಕೂಡ ಒಂದು ಸಂಬಂಧವಿರುತ್ತದೆ. ಪರಸ್ಪರ ಅವಲಂಬನೆ ಮತ್ತು ಸಹಜ ಜೀವನ ನಮಗೆ ಈಗೀಗ ರೂಢಿಯಾಗುತ್ತಿದೆ. ಇತರರ ನೆರವು ಇಲ್ಲದೆ ನಮಗೆ ಬದುಕಲು ಸಾಧ್ಯವೇ ಆಗುತ್ತಿಲ್ಲ ಆದ್ದರಿಂದ ಇತರರ ನೆರವಿಗಿಂತ ಮುಂಚಿತವಾಗಿ ನಮ್ಮ ಜೀವನವನ್ನು ನಾವು ಕಟ್ಟಿಕೊಳ್ಳೋದಕ್ಕೆ ಪ್ರಯತ್ನವನ್ನು ಪಡಬೇಕು ಇಂತಹ ಜಗತ್ತಿನಲ್ಲಿ ಸ್ವಾರ್ಥಕ್ಕೆ ಯಾವುದೇ ಬೆಲೆಯಿಲ್ಲ ಇತರರ ಬಗ್ಗೆ ಇರುವ ನಿಜವಾದ ಸಹಾನುಭೂತಿ ಮಾತ್ರ ಶಮನ ಕಾರಿಯಾಗುತ್ತದೆ. ಪ್ರೀತಿಯ ಬಗ್ಗೆ ಬುದ್ಧನ ಬೋಧನೆಯು ಸಹಾನುಭೂತಿಯ ಸುತ್ತಲೂ ತಿರುಗುತ್ತಿರುತ್ತದೆ. ಮನುಷ್ಯನಲ್ಲಿರುವ ಈ ಗುಣ ಮಾತ್ರ ವಿಶ್ವವನ್ನು ದೊಡ್ಡ ಅಪಾಯದಿಂದ ಕಾಪಾಡುತ್ತೆ ಅಂತ ಬುದ್ಧ ಹೇಳಿದ್ದಾರೆ. ಹೌದು ಸ್ನೇಹಿತರೆ ಬುದ್ಧ ಹೇಳಿದ ಈ ಮಾತುಗಳನ್ನು ನಾವು ಅನುಸರಿಸುವುದರಿಂದ ನಮ್ಮ ಜೀವನದಲ್ಲಿ ನಾವು ಯಶಸ್ಸನ್ನು ಕಾಣಬಹುದು.



Scanned with OKEN Scanner

# 'ಪರಯಾನ್ ಮರಂದ ಕದೆಗಳ್'
## ಮಾನವೀಯತೆಯನ್ನು ಬಡಿದೆಬ್ಬಿಸಿದ ನಾಟಕ ಪ್ರಯೋಗ

